# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 03-12-2013 ರಂದು ಕೈಗೊಂಡ ಸಹಾಯಕ ಕಂದಾಯ ಅಧಿಕಾರಿ ಕೆಂಗೇರಿ ಉಪ ವಿಭಾಗ ಕಛೇರಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೆಂಗೇರಿ ಉಪ ವಿಭಾಗ ಕಛೇರಿ ಹಾಗೂ ಕಾರ್ಯಪಾಲಕ ಅಭಿಯಂತರರು ಕೆಂಗೇರಿ ವಿಭಾಗ ಕಛೇರಿಗಳ ತಪಾಸಣಾ ವರದಿ**

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|
| 1. ಲಕ್ಷ್ಮಿಕಾಂತರೆಡ್ಡಿ | – ಅಧ್ಯಕ್ಷರು | ಸಹಾಯಕ ಕಂದಾಯ ಅಧಿಕಾರಿ (ಕೆಂಗೇರಿ) |
| 2. ಹೆಚ್.ಎಸ್.ಲಲಿತ | – ಸದಸ್ಯರು | ಸಹಾಯಕ ಕಾರ್ಯನಿರ್ವಾಹಕ |
| 3. ಆನಂದ್ ವಿ | – ಸದಸ್ಯರು | ಅಭಿಯಂತರರು (ಕೆಂಗೇರಿ) |
| 4. ವರಲಕ್ಷ್ಮಿ ಜೆ | – ಸದಸ್ಯರು | |
| 5. ಎಂ.ಕೆ.ಗುಣಶೇಖರ್ | – ಸದಸ್ಯರು | |

ಈ ದಿವಸ ಬೆಳಿಗ್ಗೆ 11.30 ರ ಸಮಯಕ್ಕೆ ಸಹಾಯಕ ಕಂದಾಯ ಅಧಿಕಾರಿ ಕೆಂಗೇರಿ ಉಪ ವಿಭಾಗ ಕಛೇರಿಗೆ ಸಮಿತಿಯು ಭೇಟಿ ನೀಡಿ ಆಡಳಿತಾತ್ಮಕ ಕೆಲಸಕಾರ್ಯಗಳ ಬಗ್ಗೆ ತಪಾಸಣೆ ಕೈಗೊಳ್ಳಲಾಗಿರುತ್ತದೆ. ಈ ಸಂದರ್ಭದಲ್ಲಿ ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿಗಳು ಸೇರಿದಂತೆ ಕಛೇರಿಯಲ್ಲಿದ್ದ ಯಾವೊಬ್ಬ ಸಿಬ್ಬಂದಿವರ್ಗದವರು ಸಹ ಗುರುತಿನ ಚೀಟಿ ಧರಿಸಿರುವುದಿಲ್ಲ ನಾಲ್ಕನೇ ದರ್ಜೆ ನೌಕರರುಗಳು ಸಮವಸ್ತ್ರ ಧರಿಸಿರುವುದಿಲ್ಲ ಹಾಜರಾತಿ ಪುಸ್ತಕವನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿರುವುದಿಲ್ಲ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿದ್ದ ಕಂದಾಯ ಪರಿವೀಕ್ಷಕರು/ತೆರಿಗೆ ವಸೂಲಿಗಾರರು ಕಛೇರಿಯಲ್ಲಿ ಹಾಜರಿರುವುದಿಲ್ಲ ಈ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ ರವನ್ನು ವಿವರಣೆ ಕೇಳಲಾಗಿ ಎಲ್ಲರೂ ತಪಾಸಣೆಗಾಗಿ ತೆರಳಿರುವುದಾಗಿ ತಿಳಿಸಿರುತ್ತಾರೆ. ಆದರೆ ಯಾವ ಸ್ಥಳಕ್ಕೆ ಯಾವ ಉದ್ದೇಶಕ್ಕಾಗಿ ತಪಾಸಣೆಗೆ ತೆರಳಿರುತ್ತಾರೆಂಬುದಕ್ಕೆ ಚಲನವಲನ ಪುಸ್ತಕದಲ್ಲಿ ವಿವರಗಳನ್ನು ನಮೂದಿಸಿರುವುದಿಲ್ಲ. ಕಛೇರಿಯಲ್ಲಿದ್ದ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ಪರಿಶೀಲಿಸಲಾಗಿ ಸಿಬ್ಬಂದಿವರ್ಗದವರಿಗೆ ಕಾಲಕಾಲಕ್ಕೆ ನೀಡಬೇಕಾದ ಸೌಲಭ್ಯಗಳನ್ನು ಮಂಜೂರು ಮಾಡಿ ವಿವರಗಳನ್ನು ನಮೂದಿಸಿ ದೃಢೀಕರಿಸಿಲ್ಲದೇ ಇರುವುದು ಕಂಡುಬಂದಿರುತ್ತದೆ. ಕೆ.ಟಿ.ಆರ್ ರಿಜಿಸ್ಟರ್‌ಗಳಲ್ಲಿ ಖಾತಾ ವರ್ಗಾವಣೆ ಕಡತಗಳಿಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮದ ಕುರಿತು ಯಾವುದೇ ಮಾಹಿತಿಗಳನ್ನು ನಮೂದಿಸಿರುವುದಿಲ್ಲ. ಕಛೇರಿಯಲ್ಲಿ ಆಡಿಟ್ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಉತ್ತರ ನೀಡಿರುವ ಕುರಿತು ಪುಸ್ತಕ ನಿರ್ವಹಿಸಿರುವುದಿಲ್ಲ. ಸುಮಾರು 2011–12ನೇ ಸಾಲಿನಲ್ಲಿದಲ್ಲೂ ಚೆಕ್ ಬೌನ್ಸ್ ಪ್ರಕರಣಗಳಲ್ಲಿ ಆಸ್ತಿದಾರರಿಂದ ಮೊತ್ತ ವಸೂಲಿ ಮಾಡದೇ ಕಂದಾಯ ಪರಿವೀಕ್ಷಕರು/ ತೆರಿಗೆ ವಸೂಲಿಗಾರರು ಕರ್ತವ್ಯಲೋಪ ವೆಸಗಿರುತ್ತಾರೆ.

Liedely 5/12/13

ಸಹಾಯಕ ಕಂದಾಯ ಅಧಿಕಾರಿ/ಮೌಲ್ಯಮಾಪಕರು/ಕಂದಾಯ ಪರಿವೀಕ್ಷಕರು ಹಾಗೂ ತೆರಿಗೆ ವಸೂಲಿಗಾರರು ಪ್ರತಿನಿತ್ಯ ಕಂದಾಯ ಪಾವತಿಸಿರುವ ಕಟ್ಟಡಗಳನ್ನು ತಪಾಸಣೆ ಮಾಡಿ ಸದರಿಯವರು ಪಾವತಿಸಿರುವ ಕಂದಾಯದ ಮೊತ್ತ ಸರಿಯಾಗಿರುವ ಬಗ್ಗೆ ಪರಿಶೀಲಿಸಿ ತಪ್ಪಾಗಿದಲ್ಲಿ ಮರು ಮೌಲ್ಯಮಾಪನ ಮಾಡಿ ಕಂದಾಯ ನಿಗಧಿ ಪಡಿಸಬೇಕಾಗಿದ್ದರೂ ಯಾರೊಬ್ಬರೂ ಸಹ ಈ ಕಾರ್ಯವನ್ನು ನಿರ್ವಹಿಸಿರುವುದಿಲ್ಲ. ಮುಖ್ಯವಾಗಿ ಸಹಾಯಕ ಕಂದಾಯ ಅಧಿಕಾರಿರವರೇ ಈ ಕಛೇರಿಯಲ್ಲಿ ಒಟ್ಟು 20 ಕೋಟಿ ರೂಗಳಷ್ಟು ತೆರಿಗೆ ವಸೂಲಾಗಬೇಕಾಗಿದ್ದರೂ 8 ತಿಂಗಳಗಳು ಕಳೆದಿದ್ದರೂ ಕೇವಲ 8 ಕೋಟಿ ವಸೂಲು ಮಾಡಿರುವುದಾಗಿ ತಿಳಿಸಿರುತ್ತಾರೆ. ಇದರಿಂದ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಕಾರ್ಯವೈಖರಿ ಯಾವ ರೀತಿ ಇರುತ್ತದೆ ಎಂಬುದನ್ನು ಮನಗಾಣಬಹುದಾಗಿರುತ್ತದೆ. ಕೆಲವೊಂದು ಖಾತಾ ವರ್ಗಾವಣೆ ಮಾಡಲಾದ ಕಡತಗಳನ್ನು ಪರಿಶೀಲಿಸಲಾಗಿ ಕಡತಗಳನ್ನು ನಿಯಮಾನುಸಾರ ನಿರ್ವಹಿಸದೇ ಇರುವುದು ಕಂಡುಬಂದಿರುತ್ತದೆ.

ತಪಾಸಣೆ ಸಂದರ್ಭದಲ್ಲಿ ಶ್ರೀ. ಚಂದ್ರಶೇಖರ್ ಎಂಬ ಹೆಸರಿನ ಸಾರ್ವಜನಿಕರೊಬ್ಬರು ಏಪ್ರಿಲ್ ಮಾಹೆಯಲ್ಲಿಯೇ ಕಂದಾಯ ಪಾವತಿಸಿ ಸ್ವೀಕೃತಿ ಪಡೆಯಲಾಗಿದ್ದು ಸುಮಾರು 10 ರಿಂದ 12 ಸಲ ಕಛೇರಿಗೆ ಅಲೆದರೂ ಕಂದಾಯ ಪಾವತಿಸಿರುವ ರಸೀದಿಯನ್ನು ನೀಡಿರುವುದಿಲ್ಲವೆಂದು ದೂರಿರುತ್ತಾರೆ ಹಾಗೂ ಈ ಕಛೇರಿಯಲ್ಲಿ ಯಾವೊಬ್ಬ ಅಧಿಕಾರಿ/ಸಿಬ್ಬಂದಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ ರವರು ಸಮರ್ಪಕವಾದ ಸಮಜಾಯಿಷಿ ನೀಡಿರುವುದಿಲ್ಲ ತಕ್ಷಣವೇ ಸಾರ್ವಜನಿಕರಿಗೆ ಕಂದಾಯ ಪಾವತಿಸಿರುವ ರಸೀದಿ ಒದಗಿಸುವಂತೆ ತಿಳಿಸಲಾಗಿರುತ್ತದೆ.

ಕಛೇರಿಯಲ್ಲಿ ಹಾಜರಿದ್ದ ತೆರಿಗೆ ಪರಿವೀಕ್ಷಕರ ಕಂದಾಯ ಪಾವತಿ ಪುಸ್ತಕವನ್ನು ಪರಿಶೀಲಿಸಲಾಗಿ ಕಂದಾಯ ಪಾವತಿಸಿಕೊಂಡು ಬ್ಯಾಂಕಿಗೆ ಪಾವತಿಸಿರುವ ಬಗ್ಗೆ ವಿವರಗಳನ್ನು ನಮೂದಿಸದೇ/ದೃಢೀಕರಿಸದೇ ಇರುವುದು ಕಂಡುಬಂದಿರುತ್ತದೆ. ಒಟ್ಟಾರೇ ಸಹಾಯಕ ಕಂದಾಯ ಅಧಿಕಾರಿ ಕೆಂಗೇರಿ ಉಪ ವಿಭಾಗ ಕಛೇರಿಯಲ್ಲಿ ಯಾವುದೇ ಕಾರ್ಯಗಳನ್ನು/ ರಿಜಿಸ್ಟರ್‌ಗಳನ್ನು ನಿಯಮಾನುಸಾರ ನಿರ್ವಹಣೆ ಮಾಡದೇ ಇರುವುದು ಕಂಡುಬಂದಿರುತ್ತದೆ.

ನಂತರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೆಂಗೇರಿ ಉಪ ವಿಭಾಗಕ್ಕೆ ಭೇಟಿ ನೀಡಲಾಗಿ ಕಛೇರಿಯಲ್ಲಿದ್ದ ನಾಲ್ಕನೇ ದರ್ಜೆ ನೌಕರರು ಸಮವಸ್ತ್ರ ಧರಿಸದೇ ಇರುವುದು ಕಂಡುಬಂದಿರುತ್ತದೆ. ಹಾಜರಾತಿ ಪುಸ್ತಕ/ಚಲನವಲನ ಪುಸ್ತಕವನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿರುವುದಿಲ್ಲ. ತಪಾಸಣೆಗೆ ಎಲ್.ಪಿ ರಿಜಿಸ್ಟರ್ ಹಾಗೂ ಪಿ.ಓ ಮತ್ತು ಸಿ.ಓ ರಿಜಿಸ್ಟರ್ ಅನ್ನು ಒದಗಿಸಿರುವುದಿಲ್ಲ.

ಅನಂತರ ಕಾರ್ಯಪಾಲಕ ಅಭಿಯಂತರರು ಕೆಂಗೇರಿ ವಿಭಾಗ ಕಛೇರಿಗೆ ಭೇಟಿ ನೀಡಿ ಕ್ಯಾಷ್ ಪುಸ್ತಕ, ಬಿ.ಆರ್ ರಿಜಿಷ್ಟರ್, ಎಂ.ಬಿ.ಪುಸ್ತಕ ಲೆಕ್ಕ ಪುಸ್ತಕ, ಲೆಕ್ಕ ಪರಿಶೋಧನಾ ವರದಿಗಳು, ಪಾವತಿ ಪುಸ್ತಕ ಟೆಂಡರ್ ತೆರೆಯುವ ಪುಸ್ತಕ, ಇ.ಎಂ.ಡಿ ಪುಸ್ತಕಗಳನ್ನು ಪರಿಶೀಲಿಸಲಾಗಿ ಎಂ.ಬಿ ಪುಸ್ತಕಗಳನ್ನು ಸಮಪರ್ಕವಾಗಿ ನಿರ್ವಹಿಸದೇ ಇರುವುದನ್ನು ಗಮನಿಸಲಾಗಿರುತ್ತದೆ. ಕಛೇರಿಯಲ್ಲಿ ಚೆಕ್ ವಿತರಣೆ ಮಾಡುವ

5/12/13

ಪ್ರತ್ಯೇಕವಾದ ರಿಜಿಸ್ಟರ್ ಅನ್ನು ನಿರ್ವಹಿಸಿರುವುದಿಲ್ಲ ಆಡಿಟ್ ಆಕ್ಷೇಪಣೆಗಳಿಗೆ ಉತ್ತರ ನೀಡಿದ್ದು ತೀರುವಳಿ ಪಡೆಯಲು ಯಾವುದೇ ಕ್ರಮಕೈಗೊಂಡಿರುವುದಿಲ್ಲ ಕಛೇರಿಯಲ್ಲಿನ ಎಲ್ಲಾ ರಿಜಿಸ್ಟರ್‌ಗಳನ್ನು ಆಂಗ್ಲ ಭಾಷೆಯಲ್ಲಿ ನಿರ್ವಹಿಸಲಾಗಿರುತ್ತದೆ.

ತಪಾಸಣೆ ಮಾಡಲಾದ ಎಲ್ಲಾ ಕಛೇರಿಗಳ ಪರಿಸರವು ಪೂರ್ಣ ಪ್ರಮಾಣದಲ್ಲಿ ದುರ್ವಾಸನೆ/ಅಶುಚಿತ್ವದಿಂದ ಕೂಡಿದ್ದು, ಸ್ವಚ್ಚತಾ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದರೂ ಯಾವೊಬ್ಬ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸದೇ ಇರುವುದು ಅವರುಗಳ ಬೇಜವಾಬ್ದಾರಿತನವನ್ನು ಎತ್ತಿತೋರಿಸುತ್ತದೆ. ಕಚೇರಿಗಳ ಆವರಣದಲ್ಲಿನ ಅಶುಚಿತ್ವದ ಬಗ್ಗೆ ಅಧಿಕಾರಿಗಳು ಸೂಕ್ತ ಗಮನ ಹರಿಸಿ ಶುಚಿತ್ವದ ಬಗ್ಗೆ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳತಕ್ಕದೆಂದು ಸಮಿತಿಯು ಸೂಚಿಸಿರುತ್ತದೆ.

ಒಟ್ಟಾರೆ, ತಪಾಸಣೆ ಮಾಡಲಾದ ಕಛೇರಿಗಳಲ್ಲಿ ಸಿಬ್ಬಂದಿವರ್ಗದವರು ನಿಯಮಾನುಸಾರ ಕಾರ್ಯನಿರ್ವಹಿಸದೇ ಬೇಜಾವಾಬ್ದಾರಿತನ/ ಅಸಡ್ಡೆ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿರುವುದರಿಂದ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವಂತೆ ಅಪರ ಆಯುಕ್ತರು ರಾಜರಾಜೇಶ್ವರಿನಗರರವರಿಗೆ ಸೂಕ್ತ ನಿರ್ದೇಶನ ನೀಡುವುದು ಹಾಗೂ ತಪಾಸಣೆ ಸಂದರ್ಭದಲ್ಲಿ ಕಂಡುಬಂದ ನ್ಯೂನತೆಗಳಿಗೆ ಸಂಬಂಧಿಸಿದಂತೆ ಕರ್ತವ್ಯಲೋಪವೆಸಗಿರುವ ಅಧಿಕಾರಿ/ ಸಿಬ್ಬಂದಿವರ್ಗದವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.

ಮುಂದುವರೆದಂತೆ ಪಾಲಿಕೆಯ ಸಿಬ್ಬಂದಿವರ್ಗದವರು ಶಿಸ್ತಿನಿಂದ ಕಾರ್ಯನಿರ್ವಹಿಸುವ ಬಗ್ಗೆ ಹಾಗೂ ಮೇಲಧಿಕಾರಿಗಳು ಸಮರ್ಪಕವಾಗಿ ಮೇಲ್ವಿಚಾರಣೆ ಮಾಡುವ ಸಲುವಾಗಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

5/12/13

ಅಧ್ಯಕ್ಷರು

*ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ*

ಪ್ರತಿಯನ್ನು:

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಎಲ್ಲಾ ಸಮಿತಿಯ ಅಧ್ಯಕ್ಷರುವರುಗಳಿಗೆ*
4. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
5. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
6. *ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
7. *ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
8. *ಅಪರ ಆಯುಕ್ತರು (ರಾಜರಾಜೇಶ್ವರಿನಗರ) ರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.*
9. *ಕೌನ್ಸಿಲ್ ಕಾರ್ಯದರ್ಶಿಗಳು ರವರಿಗೆ*
10. *ಕಛೇರಿ ಪ್ರತಿ*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ:09-12-2013 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು ಶ್ರೀಯುತರುಗಳಾದ |
|---|---|---|
| 1. ಲಕ್ಷ್ಮೀಕಾಂತ ರೆಡ್ಡಿ | – ಅಧ್ಯಕ್ಷರು | ಉಪ ಆಯುಕ್ತರು (ಆಡಳಿತ) |
| 2. ಕೆ.ಮಹೇಶ್ ಬಾಬು | – ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| 3. ಲಲಿತ ಹೆಚ್.ಎಸ್. | – ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 4. ಆನಂದ್ ವಿ | – ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ) |
| 5. ಎಂ.ಶ್ರೀನಿವಾಸ | – ಸದಸ್ಯರು | ವಿದ್ಯಾಧಿಕಾರಿ(ಪ್ರಭಾರ) |
| 6. ಲಾವಣ್ಯ ಗಣೇಶ್ ರೆಡ್ಡಿ | – ಸದಸ್ಯರು | ವಿಶೇಷ ಅಧಿಕಾರಿ |
| 7. ವರಲಕ್ಷ್ಮಿ ಜೆ | – ಸದಸ್ಯರು | ಕಿರಿಯ ಕಾನೂನು ಅಧಿಕಾರಿ |
| 8. ಎಂ.ಕೆ. ಗುಣಶೇಖರ್ | – ಸದಸ್ಯರು | |

( ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/33/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಶ್ರೀ. ಎನ್. ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರು ಮನವಿ ಸಲ್ಲಿಸಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಧಿಕ ಕಾನೂನು ಸಲಹೆಗಾರನಾಗಿ ಜಿಲ್ಲಾ ನ್ಯಾಯಾಧೀಶರ ಸೂಪರ್ ಟೈಂ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸಿ ದಿನಾಂಕ:30.06.2005ರಲ್ಲಿ ನಿವೃತ್ತಿ ಹೊಂದಿದ್ದು, ನಿವೃತ್ತಿಯಾಗುವ ಅವಧಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವಿರುದ್ಧ ಹೂಡಿರುವ ನ್ಯಾಯಾಲಯ ದಾವೆ/ರಿಟ್/ಮೇಲ್ಮನವಿ ಇತ್ಯಾದಿಗಳ ಸಂಪೂರ್ಣ ಮಾಹಿತಿಯನ್ನು ಸಿದ್ಧಗೊಳಿಸಿರುತ್ತೇನೆ. ಅದರಲ್ಲಿ ವಿಷಯವಾರು, ನ್ಯಾಯಾಲಯಗಳವಾರು, ವಾರ್ಷಿಕವಾರು, ನ್ಯಾಯವಾದಿಗಳವಾರು ಪ್ರತ್ಯೇಕಿಸಿ ಯಾವುದೇ ಮಾಹಿತಿಯು ಕ್ಷಣಾರ್ಧದಲ್ಲಿ ಲಭ್ಯವಾಗುವಂತೆ ತಯಾರಿಸಿ ಗಣಕೀಕರಣಗೊಳಿಸಿರುತ್ತೇನೆ. ಮುಖ್ಯವಾಗಿ ನಗರ ಪಾಲಿಕೆ ಸ್ವತ್ತುಗಳ ಬಗ್ಗೆ ಅತಿ ಹೆಚ್ಚು ಮುತುವರ್ಜಿ ವಹಿಸಿ ನಗರ ಪಾಲಿಕೆ ಸ್ವತ್ತುಗಳನ್ನು ಸಂರಕ್ಷಿಸುವಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿರುತ್ತೇನೆ. ಜೊತೆಗೆ ನ್ಯಾಯಾಲಯಗಳ ಆದೇಶವನ್ನು ಪಾಲನೆ ಮಾಡುವುದು ಅಥವಾ ಮೇಲ್ಮನವಿ ಸಲ್ಲಿಸುವುದರೊಂದಿಗೆ ನ್ಯಾಯಾಲಯ ನಿಂದನೆ ಪ್ರಕರಣಗಳು ಆಗದಂತೆ ನೋಡಿಕೊಳ್ಳಲಾಗುತ್ತಿತ್ತು. ದಿನಾಂಕ:16.01.2007ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಏಳು ಸಿ.ಎಂ.ಸಿ ಪ್ರದೇಶಗಳು, ಒಂದು ಪುರಸಭೆ, ಹೊಸ ಬಿ.ಡಿ.ಎ. ಬಡಾವಣೆ ಮತ್ತು 110 ಹಳ್ಳಿಗಳನ್ನು ಸೇರಿಸಿಕೊಳ್ಳಲಾಗಿರುತ್ತದೆ. ಈ ಪ್ರದೇಶದಲ್ಲಿ ಬರುವ ಸರ್ಕಾರಿ ಸ್ವತ್ತುಗಳನ್ನು



ಅಧ್ಯಕ್ಷರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗುರುತಿಸಿ ಅವುಗಳನ್ನು ನಗರ ಪಾಲಿಕೆ ಆಸ್ತಿ ಪುಸ್ತಕದಲ್ಲಿ ದಾಖಲಿಸಿಕೊಳ್ಳಲು ಕ್ರಮ ತೆಗೆದುಕೊಳ್ಳುವುದು ಅತ್ಯಾವಶ್ಯಕವಾಗಿರುತ್ತದೆ ಹಾಗೂ ಈ ಪ್ರದೇಶಗಳಲ್ಲಿನ ಹೊಸ ದಾವೆ/ಮೊಕದ್ದಮೆಗಳನ್ನು ಕೂಡಾ ಕ್ರೂಢೀಕರಿಸಿ ಗಣಕೀಕರಣಗೊಳಿಸಬೇಕಾಗಿರುತ್ತದೆ. ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಮಹಾನಗರ ಪಾಲಿಕೆಯಲ್ಲಿ ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷಗಳ ಕಾಲ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿರುತ್ತಾರೆ.

ಕಾನೂನು ಕೋಶದ ಮುಖ್ಯಸ್ಥರು ದಿನಾಂಕ:29.06.2012ರಂದು ನೀಡಿರುವ ಅಭಿಪ್ರಾಯ ವರಧಿಯಲ್ಲಿ ಸದರಿ ನಿವೃತ್ತ ಅಧಿಕಾರಿಯವರು ದಿನಾಂಕ:21.05.2012ರಂದು ಅರ್ಜಿ ಸಲ್ಲಿಸಿ ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಕಾನೂನು ವಿಭಾಗದ ಸಲಹೆಗಾರರನ್ನಾಗಿ ನೇಮಿಸಲು ಕೋರಿಕೊಂಡಿರುತ್ತಾರೆ. ಪಾಲಿಕೆಯಲ್ಲಿ ಸಿಬ್ಬಂದಿ ಕೊರತೆ ಹೆಚ್ಚಾಗಿದ್ದು ದಿನೇ ದಿನೇ ಪ್ರಕರಣಗಳು ಹೆಚ್ಚಾಗಿರುತ್ತವೆ. ಈ ಸಂಬಂಧ 1977 ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ 20ರನ್ವಯ ಸರ್ಕಾರದ ಪೂರ್ವಾನ್ವಯ ಮಂಜೂರಾತಿ ಪಡೆದು 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಆದ ಮೇರೆಗೆ ಸದರಿ ನಿಯಮದಡಿ ಸದರಿ ನಿವೃತ್ತ ಅಧಿಕಾರಿಯವರನ್ನು ನೇಮಿಸಿಕೊಳ್ಳಲು ಕ್ರಮವಹಿಸಬಹುದಾಗಿರುತ್ತದೆಯೆಂದು ಅಭಿಪ್ರಾಯ ನೀಡಿರುತ್ತಾರೆ.

ಕಾನೂನು ಕೋಶದ ಮುಖ್ಯಸ್ಥರು ದಿನಾಂಕ:29.06.2012ರಂದು ನೀಡಿರುವ ಅಭಿಪ್ರಾಯದನ್ವಯ ಶ್ರೀ. ಎನ್.ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ಒಂದು ವರ್ಷದ ಅವಧಿಗೆ ಸಂಚಿತ ವೇತನದ ಮೇಲೆ ಪಾಲಿಕೆಯ ಕಾನೂನು ವಿಭಾಗದಲ್ಲಿ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸಲು ದಿನಾಂಕ:28.08.2012ರ ಆದೇಶದಂತೆ ನೇಮಿಸಲಾಗಿರುತ್ತದೆ.

**ಷರತ್ತುಗಳು:-**

1. ಸದರಿಯವರನ್ನು ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ. ಕೆ.ಸಿ.ಎಸ್.ಆರ್. ನಿಯಮ ಅನ್ವಯಿಸುವುದಿಲ್ಲ.
2. ಸದರಿಯವರನ್ನು ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಮಾತ್ರ ನೇಮಕ ಮಾಡಿಕೊಳ್ಳಲಾಗಿರುತ್ತದೆ.
3. ಸದರಿಯವರು ಮಾನ್ಯ ಆಯುಕ್ತರು ರವರು ಸೂಚಿಸುವ ಎಲ್ಲಾ ಕೆಲಸಗಳನ್ನು ನಿರ್ವಹಿಸತಕ್ಕದ್ದು.
4. ಸದರಿಯವರ ಸೇವೆಯು ಪಾಲಿಕೆಗೆ ಅಗತ್ಯವಿಲ್ಲವೆಂದು ಕಂಡುಬಂದರೆ ಯಾವುದೇ ನೋಟೀಸ್ ನೀಡದೆ ಸೇವೆಯಿಂದ ಬಿಡುಗಡೆ ಮಾಡಲಾಗುತ್ತದೆ.

ಅಧ್ಯಕ್ಷರು
ಬೃಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

5. ಸದರಿಯವರು ಯಾವುದೇ ರೀತಿಯ ಹಣಕಾಸಿನ ಕಡತಗಳಿಗೆ ಅನುಮೋದನೆ ಅಥವಾ ಸಹಿ ಮಾಡುವ ಹಾಗೂ ಶಾಸನಬದ್ಧ ಅಧಿಕಾರವನ್ನು ಹೊಂದಿರುವುದಿಲ್ಲ.

ನಂತರದಲ್ಲಿ ಶ್ರೀ. ಎನ್. ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರನ್ನು ಪಾಲಿಕೆಯಲ್ಲಿ ಕಾನೂನು ಸಲಹೆಗಾರರಾಗಿ ನೇಮಿಸಿಕೊಂಡಿರುವಂತೆ ಇವರಿಗೆ ಈ ಕಛೇರಿಯ ದಿನಾಂಕ:21.12.2012ರ ಆದೇಶದಂತೆ ಮಾಹೆಯಾನ ರೂ.30,000/-(ಮೂವತ್ತು ಸಾವಿರ)ಗಳ ಸಂಚಿತ ವೇತನವನ್ನು ನಿಗಧಿಪಡಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ. ಎನ್. ಮಾದಯ್ಯ, ನಿವೃತ್ತ ಅಧಿಕ ಕಾನೂನು ಸಲಹೆಗಾರರು ಇವರನ್ನು ಪಾಲಿಕೆಯಲ್ಲಿ ಒಂದು ವರ್ಷದ ಅವಧಿಗೆ ಕಾನೂನು ಸಲಹೆಗಾರರಾಗಿ ಮಾಹೆಯಾನ ರೂ.30,000/- (ಮೂವತ್ತು ಸಾವಿರ)ಗಳ ಸಂಚಿತ ವೇತನದ ಮೇಲೆ ನೇಮಿಸಿಕೊಂಡಿರುವ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ಕೋರಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:17.01.2013ರ ಸಂಖ್ಯೆ:ಬಿ12(3ಎ)/ಪಿಆರ್/31/2012-13ರ ಟಿಪ್ಪಣಿ

ಈ ಕುರಿತಂತೆ ದಿನಾಂಕ:25-02-2013 ರಂದು ಈ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಿ ಮರುಮಂಡಿಸಲು ಆಯುಕ್ತರಿಗೆ ಸೂಚಿಸಿ ನಿರ್ಣಯ ಕೈಗೊಳ್ಳಲಾಗಿರುತ್ತದೆ.

(1) ದಿನಾಂಕ:28.08.2012ರಂದು ಕಛೇರಿ ಆದೇಶ ಹೊರಡಿಸುವ ಮುನ್ನ ಸಮಿತಿಯ ಅಭಿಪ್ರಾಯ ಪಡೆಯುವ ಅವಶ್ಯಕತೆ ಇಲ್ಲವೆ?

(2) ಸದರಿಯವರಿಗೆ ಸಂಚಿತ ವೇತನವನ್ನು ಕೆ.ಸಿ.ಎಸ್.ಆರ್. ನಿಯಮ 313 ಬಿ(1) ರೀತ್ಯಾ ಪಾವತಿಸಲಾಗುತ್ತಿದೆಯೆ ಹಾಗೂ ಇವರಿಗೆ ಬೇರೆ ಯಾವ ವಿಧವಾದ ಸೌಲಭ್ಯಗಳನ್ನು ನೀಡಲಾಗುತ್ತಿದೆ ವರದಿ ನೀಡಿ.

(3) ಈಗಾಗಲೇ 6 ತಿಂಗಳುಗಳ ಅವಧಿಯು ಮುಗಿಯಲಿದ್ದು, ಸಮಿತಿಯ ಹಾಗೂ ಪಾಲಿಕೆಯ ತೀರ್ಮಾನದ ನಂತರ ಸರ್ಕಾರದ ಅನುಮತಿಯು ಅತ್ಯವಶ್ಯಕವಿದ್ದು, ಒಂದು ಪಕ್ಷ ಸರ್ಕಾರವು ಈ ಹಿಂದೆ ಶ್ರೀ. ಎನ್.ಎಸ್. ಗುಂಡಪ್ಪ, ನಿವೃತ್ತ ನೌಕರರ ನಿಯೋಜನೆಯನ್ನು ತಿರಸ್ಕರಿಸಿದಂತೆ ಇವರ ಪ್ರಸ್ತಾವನೆಯನ್ನು ತಿರಸ್ಕರಿಸಿದಲ್ಲಿ ಇದರಿಂದ ಉಂಟಾಗುವ ನಷ್ಟ ಹಾಗೂ ಇತರೆ ಪ್ರಕ್ರಿಯೆಗಳಿಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

(4) ಸರ್ಕಾರದ ನಿಯಮಗಳ ಅನುಸಾರ ನಿವೃತ್ತ ಅಧಿಕಾರಿಗಳ ವಯೋಮಿತಿ ಅನುಸಾರವಾಗಿ ಮರು ನೇಮಕಾತಿ ಮಾಡಿಕೊಳ್ಳಲಾಗಿದೆಯೇ?

ನ್ಯೂನತೆಗೆ ಸಂಬಂಧಿಸಿದಂತೆ ಆಯುಕ್ತರ ಆದೇಶದ ಪ್ರಕಾರ ಅಪರ ಆಯುಕ್ತರು (ಆಡಳಿತ) ರವರು ಸ್ಪಷ್ಟೀಕರಣ ನೀಡಿರುವ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 17-01-2013 ರ ಸಂಖ್ಯೆ: ಬಿ12 (3ಎ) ಪಿಆರ್/31/12-13 ರ ಟಿಪ್ಪಣಿಯನ್ನು ಒಪ್ಪಿರುವ ದಿನಾಂಕ: 11-02-2013 ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ನಿರ್ಣಯ.

<u>ನಿರ್ಣಯ:</u> ಮುಂದೂಡಿದೆ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಿಷಯ ಸಂಖ್ಯೆ: ಸಿಆಸುಸ್ಥಾಸ/35/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಡಾ॥ ಎ.ಎಸ್. ಬಾಲಸುಂದರ್, ಉಪ ಆರೋಗ್ಯಾಧಿಕಾರಿ, ಪೂರ್ವ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರನ್ನು ಮುಖ್ಯ ಆರೋಗ್ಯಾಧಿಕಾರಿಗಳ ಈ ಕೆಳಕಂಡ ವರದಿಯಂತೆ "ಪಾಲಿಕೆಯಲ್ಲಿ 06 ರೆಫೆರಲ್ ಆಸ್ಪತ್ರೆಗಳು ಮತ್ತು 23 ಹೆರಿಗೆ ಆಸ್ಪತ್ರೆಗಳಿದ್ದು, ಇಲ್ಲಿ ಸಂತಾನಹರಣ ಚಿಕಿತ್ಸೆ, ಸಿಸೇರಿಯನ್ ಚಿಕಿತ್ಸೆ ಹಾಗೂ ಸ್ತ್ರೀ ರೋಗಕ್ಕೆ ಸಂಬಂಧಪಟ್ಟ ಅನೇಕ ರೀತಿಯ ಶಸ್ತ್ರ ಚಿಕಿತ್ಸೆಗಳನ್ನು ಮಾಡಲಾಗುತ್ತಿದೆ ಮತ್ತು ಈ ಎಲ್ಲಾ ಶಸ್ತ್ರಚಿಕಿತ್ಸೆಗಳಿಗೆ ಅರವಳಿಕೆ ತಜ್ಞರ (Anesthetist) ಅವಶ್ಯಕತೆ ಇರುತ್ತದೆ. ಪಾಲಿಕೆಯ ಖಾಯಂ ವೈದ್ಯರುಗಳಲ್ಲಿ ಪ್ರಸ್ತುತ ಕೇವಲ ಇಬ್ಬರು ಅರವಳಿಕೆ ತಜ್ಞರು ಮಾತ್ರ ಇದ್ದು, ಉಳಿದವರು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ 2009ನೇ ಸಾಲಿನಲ್ಲಿ ಪಾಲಿಕೆಯ ವೈದ್ಯರುಗಳಿಗೆ ರಾಜೀವ್‌ಗಾಂಧಿ ಹೆಲ್ತ್ ಯೂನಿವರ್ಸಿಟಿಯವರು ನಡೆಸುವ ಕೌನ್ಸಿಲಿಂಗ್‌ನಲ್ಲಿ ಒಂದು ಸೀಟು ಅರವಳಿಕೆ ತಜ್ಞರ (MD-Anesthesia) ವಿಷಯದಲ್ಲಿ ಮೀಸಲಿಡಬೇಕೆಂದು ಕೋರಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ರವರಿಗೆ ಈ ಕಛೇರಿಯಿಂದ ಪತ್ರ ಬರೆಯಲಾಗಿದ್ದು, ಡಾ॥ ಎ.ಎಸ್. ಬಾಲಸುಂದರ್, ರವರಿಗೆ ಮೊದಲನೇ ಸುತ್ತಿನ ಕೌನ್ಸಿಲಿಂಗ್‌ನಲ್ಲಿ MD-Anesthesia ವಿಷಯದಲ್ಲಿ ಸೀಟು ದೊರಕಿರುವುದಿಲ್ಲ. ಬದಲಾಗಿ ಅಂತಿಮ ಸುತ್ತಿನ ಕೌನ್ಸಿಲಿಂಗ್‌ನಲ್ಲಿ ದೊರಕಿದ್ದು, ದಿನಾಂಕ:19.06.2009ರಂದು ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ ಪ್ರವೇಶ ಪಡೆದು ಉನ್ನತ ವ್ಯಾಸಂಗಕ್ಕೆ ದಾಖಲಾಗಿರುತ್ತಾರೆ. ಡಾ॥ ಎ.ಎಸ್.ಬಾಲಸುಂದರ್, ರವರು ಪಾಲಿಕೆಯ ಖಾಯಂ ನೌಕರರಾಗಿದ್ದು, ಇವರು ತಮ್ಮ ಸ್ವಂತ ಅರ್ಹತೆಯ ಮೇಲೆ PGET-2009 ಪರೀಕ್ಷೆಯಲ್ಲಿ ಸೀಟು ಗಳಿಸಿದ್ದು, ಇವರ ಸೇವೆಯನ್ನು ಉನ್ನತ ವ್ಯಾಸಂಗದ ನಂತರ ಪಾಲಿಕೆಯ ಆಸ್ಪತ್ರೆಗಳಲ್ಲಿ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಆದ್ದರಿಂದ ಡಾ॥ ಎ.ಎಸ್. ಬಾಲಸುಂದರ್, ರವರನ್ನು ಈಗಾಗಲೇ ನೀಡಿರುವ ಮಾನ್ಯ ಆಯುಕ್ತರ ಆದೇಶದಂತೆ ಹುಬ್ಬಳ್ಳಿಯ ಕಿಮ್ಸ್ ಕಾಲೇಜಿಗೆ ಉನ್ನತ ವ್ಯಾಸಂಗಕ್ಕೆ ಬಿಡುಗಡೆಗೊಳಿಸಿ ನಿಯೋಜಿಸಿರುವುದನ್ನು ಮಾರ್ಪಡಿಸಿ ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಲು ನಿಯೋಜಿಸಲು ಶಿಫಾರಸ್ಸು ಮಾಡುತ್ತಾ, ಆಯುಕ್ತರ ಕಛೇರಿಯಿಂದ ತಿದ್ದುಪಡಿ ಆದೇಶ ಹೊರಡಿಸಲು ಕೋರಿ ಕಡತವನ್ನು ಮಂಡಿಸಿರುತ್ತಾರೆ.

ಮುಖ್ಯ ಆರೋಗ್ಯಾಧಿಕಾರಿಗಳ ವರದಿಯನ್ವಯ ಡಾ॥ ಎ.ಎಸ್.ಬಾಲಸುಂದರ್, ಉಪ ಆರೋಗ್ಯಾಧಿಕಾರಿ(ಪೂರ್ವ)ರವರನ್ನು ಕಛೇರಿ ಆದೇಶದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಲು ಪಾಲಿಕೆಯ ವತಿಯಿಂದ ನಿಯೋಜಿಸಲಾಗಿದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸದರಿಯವರು ಉನ್ನತ ವ್ಯಾಸಂಗ ಪೂರ್ಣಗೊಳಿಸಿ ದಿನಾಂಕ:23.05.2012ರಂದು ಪಾಲಿಕೆಗೆ ಹಿಂದಿರುಗಿ ಹಾಜರಾಗಿರುತ್ತಾರೆ. ಸದರಿಯವರ ಹಾಜರಾತಿಯನ್ನು ಪರಿಗಣಿಸಿ ಇವರನ್ನು ಉನ್ನತ ವ್ಯಾಸಂಗಕ್ಕೆ ತೆರಳಿದ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉಪ ಆರೋಗ್ಯಾಧಿಕಾರಿ(ಪೂರ್ವ) ಹುದ್ದೆಗೆ ನಿಯೋಜಿಸಲಾಗಿದೆ.

ಮುಖ್ಯ ಆರೋಗ್ಯಾಧಿಕಾರಿಗಳವರ ಕಛೇರಿ ಆದೇಶದಲ್ಲಿ ಸದರಿಯವರನ್ನು ಉಪ ಆರೋಗ್ಯಾಧಿಕಾರಿ(ಪೂರ್ವ) ಕಛೇರಿಯ ಕೆಲಸ ಕಾರ್ಯಭಾರಗಳ ಜೊತೆಗೆ ಅಧಿಕವಾಗಿ ಪೂರ್ವ ವಲಯದ ಪಾಲಿಕೆಯ ರೆಫೆರಲ್ ಆಸ್ಪತ್ರೆಗಳ ಅಗತ್ಯವಿದ್ದ ಕಡೆಗಳಲ್ಲಿ ಹಾಗೂ ಸಂಬಂಧಪಟ್ಟ ಆಸ್ಪತ್ರೆಗಳ ವೈದ್ಯಕೀಯ ಅಧೀಕ್ಷಕರುಗಳ ಕೋರಿಕೆಯ ಆದ್ಯತೆಯ ಮೇರೆಗೆ ಅರವಳಿಕೆ ಶಾಸ್ತ್ರದ ತಜ್ಞರಾಗಿ ಮುಂದಿನ ಆದೇಶವರೆವಿಗೂ ಕಾರ್ಯನಿರ್ವಹಿಸಲು ನೇಮಿಸಿರುತ್ತಾರೆ.

ಪ್ರಸ್ತುತ ಪಾಲಿಕೆಯ ಆಸ್ಪತ್ರೆಗಳಲ್ಲಿ ಅರವಳಿಕೆ ತಜ್ಞರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ಸೇವೆ ಪಡೆದುಕೊಳ್ಳುತ್ತಿದ್ದು, ಇವರುಗಳಿಗೆ ಮೈನರ್ ಶಸ್ತ್ರಚಿಕಿತ್ಸೆಗೆ ರೂ.500/- ಹಾಗೂ ಮೇಜರ್ ಶಸ್ತ್ರ ಚಿಕಿತ್ಸೆಗೆ ರೂ. 1000/-ರಂತೆ ಒಂದು ರೆಫರಲ್ ಆಸ್ಪತ್ರೆಗೆ ತಿಂಗಳಿಗೆ ಸುಮಾರು 50,000/-ದಂತೆ 06 ರೆಫರಲ್ ಆಸ್ಪತ್ರೆಗಳಿಗೆ 2,50,000/- ದಿಂದ 3,00,000/-ರೂ ಗಳು ಖರ್ಚಾಗುತ್ತಲಿದ್ದು, ಆದ್ದರಿಂದ ಪಾಲಿಕೆಯ ವತಿಯಿಂದ ಅರವಳಿಕೆ ತಜ್ಞರ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗಕ್ಕೆ ನಿಯೋಜಿಸಿರುವುದರಿಂದ ಡಾ॥ ಎ.ಎಸ್. ಬಾಲಸುಂದರ್, ಉಪ ಆರೋಗ್ಯಾಧಿಕಾರಿ(ಪೂರ್ವ) ರವರನ್ನು ವಿಶೇಷ ಸ್ನಾತಕೋತ್ತರ ವಿಭಾಗದಲ್ಲಿ ಮುಂದುವರೆಸುವ ಬಗ್ಗೆ ದಿನಾಂಕ:29.09.2012ರ ಪಾಲಿಕೆಯ ಮಾಸಿಕ ಸಭೆಯಲ್ಲಿ ಚರ್ಚೆಯಾಗಿದ್ದು, ಈ ಸಂಬಂಧ ಅಭಿಪ್ರಾಯ ಪಡೆಯಲು ಕಡತವನ್ನು ಕಾನೂನು ಕೋಶದ ಮುಖ್ಯಸ್ಥರಿಗೆ ಕಳುಹಿಸಲಾಗಿ, ಕಾನೂನು ಕೋಶದ ಮುಖ್ಯಸ್ಥರು ಈ ಕೆಳಕಂಡಂತೆ ವರದಿ ನೀಡಿರುತ್ತಾರೆ.

"ಡಾ॥ ಎ.ಎಸ್.ಬಾಲಸುಂದರ್, (MD-Anesthesia) ರವರನ್ನು ಪಾಲಿಕೆಯ ಆರೋಗ್ಯ ವಿಭಾಗದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಆಯುಕ್ತರ ಅನುಮೋದನೆ ಪಡೆದು ಅರವಳಿಕೆ ತಜ್ಞರ (Anesthesia) ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಲು ನಿಯಮಾನುಸಾರ ಕ್ರಮವಹಿಸಬಹುದಾಗಿದೆ" ಎಂದು ಅಭಿಪ್ರಾಯಿಸಿರುತ್ತಾರೆ.

ಸದರಿ ವರದಿಗಳನ್ವಯ ಡಾ॥ ಎ.ಎಸ್. ಬಾಲಸುಂದರ್, ಉಪ ಆರೋಗ್ಯಾಧಿಕಾರಿ(ಪೂರ್ವ) ರವರು ಅರವಳಿಕೆ ತಜ್ಞರ (MD-Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಪೂರ್ಣಗೊಳಿಸಿ ಹಿಂದಿರುಗಿರುವುದರಿಂದ ಇವರ ಮುಂದಿನ ಮುಂಬಡ್ತಿ ಹುದ್ದೆಯಾದ ಆರೋಗ್ಯಾಧಿಕಾರಿ ಹುದ್ದೆಗೆ ಸಮಾನಾಂತರವಾಗಿ ವೇತನ ಶ್ರೇಣಿ ರೂ.40050-56550 ರಲ್ಲಿ "ಅರವಳಿಕೆ ತಜ್ಞರ ವಿಭಾಗದ ಮುಖ್ಯಸ್ಥರು" ಹುದ್ದೆಯನ್ನು ಸೃಜಿಸುವ ಕುರಿತಂತೆ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ

ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:11.02.2013ರ ಸಂಖ್ಯೆ:ಬಿ12(4)ಪಿಆರ್/244/2008-09ರ ಟಿಪ್ಪಣಿ.

ಈ ಕುರಿತಂತೆ ದಿನಾಂಕ:25-02-2013 ರಂದು ಈ ಕೆಳಕಂಡ ನ್ಯೂನತೆಗಳನ್ನು ಸರಿಪಡಿಸಿ ಮರುಮಂಡಿಸಲು ಆಯುಕ್ತರಿಗೆ ಸೂಚಿಸಿ ನಿರ್ಣಯ ಕೈಗೊಳ್ಳಲಾಗಿರುತ್ತದೆ.

(5) ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಈ ಹುದ್ದೆಯು ಮಂಜೂರಾಗಿರುವುದೇ?

(6) ಸದರಿ ವೈದ್ಯರನ್ನು ಈ ಹಿಂದೆ ಯಾವ ಉದ್ದೇಶಕ್ಕಾಗಿ ಉನ್ನತ ವ್ಯಾಸಂಗಕ್ಕೆ ಕಳುಹಿಸಲಾಗಿರುತ್ತದೆ ಹಾಗೂ ಇದಕ್ಕೆ ತಗಲಿರುವ ವೆಚ್ಚದ ವಿವರ ನೀಡುವುದು.

(7) ಸದರಿಯವರನ್ನು ಹುಬ್ಬಳ್ಳಿಯ ಕಿಮ್ಸ್ ಕಾಲೇಜಿಗೆ ಉನ್ನತ ವ್ಯಾಸಂಗದ ಸಲುವಾಗಿ ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಸಿ ನಿಯೋಜಿಸಿರುವ ದಿನಾಂಕದ ಬಗ್ಗೆ ವಿವರಣೆ.

(8) ಮೇಲ್ಕಂಡ ಆದೇಶವನ್ನು ಮಾರ್ಪಡಿಸಿ ಡಾ॥ ಬಿ.ಆರ್. ಅಂಬೇಡ್ಕರ್ ಕಾಲೇಜಿನಲ್ಲಿ (MD. Anesthesia) ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡಲು ನಿಯೋಜಿಸಲು ಶಿಫಾರಸ್ಸು ಮಾಡುತ್ತಾ ತಿದ್ದುಪಡಿ ಆದೇಶ ಹೊರಡಿಸಲು ಕೋರಿರುವ ಪ್ರಸ್ತಾವನೆಗೆ ನಿಯಮಾವಳಿಗಳಲ್ಲಿ ಅವಕಾಶವಿದಯೇ?

(9) ಸದರಿ ವೈದ್ಯರು ಅರವಳಿಕೆ ತಜ್ಞರ ಹುದ್ದೆಯಲ್ಲಿ ಪಾಲಿಕೆ ವೆಚ್ಚದಿಂದ ಉನ್ನತ ವ್ಯಾಸಂಗ ಪಡೆದಿದ್ದು, ಅವರನ್ನು ಕ್ಲಿನಿಕಲ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುವ ಬದಲಿಗೆ ನಾನ್ ಕ್ಲಿನಿಕಲ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ನಿಯೋಜಿಸಿರುವ ಕ್ರಮವು ಸಮಂಜಸವೇ.

(10) ಪ್ರಸ್ತಾವನೆ ಕುರಿತಂತೆ ವೇತನದ ವ್ಯತ್ಯಾಸ ವಿವರಣೆಗಳ ತಃಖ್ತೆ (Preposition Statement) ಕಡತದಲ್ಲಿ ಲಭ್ಯವಿರುವುದಿಲ್ಲ. ಈ ಬಗ್ಗೆ ಮಾಹಿತಿ ಒದಗಿಸುವುದು.

(11) ಈ ಪ್ರಕರಣವು ಪಾಲಿಕೆಯ ಆಸ್ಪತ್ರೆಗಳ ಹಿತದೃಷ್ಟಿಯಿಂದ ಅತಿ ಮುಖ್ಯವಾದ ವಿಷಯವಾಗಿದ್ದು ಇಲಾಖಾ ಮುಖ್ಯಸ್ಥರಾದ ಮುಖ್ಯ ಆರೋಗ್ಯಾಧಿಕಾರಿಗಳ ಅನುಪಸ್ಥಿತಿಯಿಂದಾಗಿ. ಸಮಿತಿಯು ಯಾವುದೇ ವಿಧವಾದ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಗದೇ ಇದ್ದು, ಸದರಿ ಅಧಿಕಾರಿಗಳ ಬೇಜವಾಬ್ದಾರಿ ಬಗ್ಗೆ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನ್ಯೂನತೆಗೆ ಸಂಬಂಧಿಸಿದಂತೆ ಆಯುಕ್ತರ ಆದೇಶದ ಪ್ರಕಾರ ಅಪರ ಆಯುಕ್ತರು (ಆಡಳಿತ) ರವರು ಸ್ಪಷ್ಟೀಕರಣ ನೀಡಿರುವ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 11-02-2013 ರ ಸಂಖ್ಯೆ: ಬಿ12 (4)ಪಿಆರ್/244/08-09 ರ ಟಿಪ್ಪಣಿ.

ನಿರ್ಣಯ: ಮುಂದೂಡಿದೆ

---

**ವಿಷಯ ಸಂಖ್ಯೆ: ಸಿಆಸುಸ್ಥಾಸ/ 03/2013-14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ವಿರೋಧ ಪಕ್ಷದ ನಾಯಕರು, ಬಿ.ಬಿ.ಎಂ.ಪಿ. ರವರ ಪತ್ರದ ಸಂಖ್ಯೆ: ಬಿ.ಬಿ.ಎಂ.ಪಿ./ವಿಪನಾ/349/2012-13, ದಿನಾಂಕ:17-06-2012ರಲ್ಲಿ ಸದರಿ ವಿಷಯವಾಗಿ ಪಾಲಿಕೆಯ ಕಲ್ಯಾಣ ವಿಭಾಗದ ವತಿಯಿಂದ 1994ರಲ್ಲಿ ಕ್ವೀನ್ ರಸ್ತೆ (ಹಳೇ ವಾರ್ಡ್ 78) ಹಾಗೂ ಜಯನಗರ 2ನೇ ಬಡಾವಣೆ (ಹಳೇ ವಾರ್ಡ್ 50)ಯಲ್ಲಿ ಗಣಕಯಂತ್ರ ತರಬೇತಿ ಕೇಂದ್ರ ತೆರೆದು, ಕಾರ್ಯ ನಿರ್ವಹಣೆ ಅನುಕೂಲಕ್ಕಾಗಿ ಗಣಕಯಂತ್ರ ಭೋದಕ/ಭೋದಕೇತರ ಸಿಬ್ಬಂದಿ ವರ್ಗದ ನೌಕರರನ್ನು ನೇಮಕ ಮಾಡಿಕೊಳ್ಳುವ ಕುರಿತು ದಿನಾಂಕ:27-04-1994ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿ/ತೀರ್ಮಾನದಂತೆ ನೌಕರರ ಸೇವೆ ಪಡೆದಿರುವ ಬಗ್ಗೆ ಹಾಗೂ ಆ ಗಣಕಯಂತ್ರ ತರಬೇತಿ ಕೇಂದ್ರ ಮುಚ್ಚಿದ ಸಂದರ್ಭದಲ್ಲಿ 2006ರಲ್ಲಿ ಇವರ ಸೇವೆಯನ್ನು ವಿದ್ಯಾ ಇಲಾಖೆಗೆ ವರ್ಗಾಯಿಸಿ, ಆ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ಪಾಲಿಕೆಯಿಂದ ವೇತನ ಪಡೆಯುತ್ತಿರುವ ಬಗ್ಗೆ ತಿಳಿದು ಬರುತ್ತದೆ ಹಾಗೂ ಪ್ರಸ್ತುತ ವಿದ್ಯಾ ಇಲಾಖೆಯಲ್ಲಿ ಇವರುಗಳು ಸೇವೆ ಸಲ್ಲಿಸುತ್ತಿದ್ದು, ಇವರ ಸೇವೆ ವಿದ್ಯಾ ಇಲಾಖೆಗೆ ಅತ್ಯಗತ್ಯವಿರುವ ಬಗ್ಗೆ ವಿದ್ಯಾಧಿಕಾರಿಗಳು ಪಾಲಿಕೆ ಆಡಳಿತದ ಗಮನಕ್ಕೂ ವರದಿ ಮಂಡಿಸಿರುವ ಬಗ್ಗೆ ತಿಳಿದು ಬರುತ್ತದೆ. ಆದರೆ ಆ ನೌಕರರುಗಳಿಗೆ ವೇತನ ನೀಡುವ ವಿಷಯದಲ್ಲಿ ಹೊರಗುತ್ತಿಗೆ ಆಧಾರದ ನಿಯೋಜಿಸಿಕೊಳ್ಳುವ ಬಗ್ಗೆ ಪ್ರಸ್ತಾಪಿಸಿ 2012ರ ಡಿಸೆಂಬರ್‌ನಿಂದ ವೇತನ ತಡೆಹಿಡಿದಿರುವುದರಿಂದ ಆರ್ಥಿಕ ಸಮಸ್ಯೆ ಎದುರಾಗಿದ್ದು, ಕುಟುಂಬದ ಜೀವನ ನಿರ್ವಹಣೆ ಸಮಸ್ಯೆ ಉಂಟಾಗಿರುವ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ.

ಈ ಬಗ್ಗೆ ಮೇಲ್ಕಂಡ ವಿವರಗಳನ್ನು ತಮ್ಮ ಗಮನಕ್ಕೆ ತರುತ್ತಾ, ಈ ವಿಷಯದಲ್ಲಿ ತಾವೂ ಪರಿಶೀಲಿಸಲು ಕೋರುತ್ತಾ, ದಿನಾಂಕ:27-04-1994ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿ/ತೀರ್ಮಾನದಂತೆ 1994ರಿಂದಲೂ ಪಾಲಿಕೆಯು ಪ್ರಸ್ತಾಪಿತ ನೌಕರರ ಸೇವೆಯನ್ನು ಪಡೆಯುತ್ತಿದ್ದು, ಅವರುಗಳಲ್ಲಿ ಹೆಚ್ಚಿನವರು ಪರಿಶಿಷ್ಟ ಜಾತಿ/ಪಂಗಡ ವರ್ಗಕ್ಕೆ ಸೇರಿದವರಾಗಿದ್ದು, ಈ ಉದ್ಯೋಗ ಅವಲಂಭಿಸಿ ಕುಟುಂಬದ ನಿರ್ವಹಣೆ, ಜವಾಬ್ದಾರಿ/ಮಕ್ಕಳ ವಿದ್ಯಾಭ್ಯಾಸ ಕಾರಣಗಳಿಂದ ಆರ್ಥಿಕ ತೊಂದರೆ ಉಂಟಾಗುತ್ತಿರುವುದರಿಂದ, ಮಾನವೀಯತೆ ದೃಷ್ಟಿಯಿಂದ, ಹೊರಗುತ್ತಿಗೆ ಆಧಾರದಲ್ಲಿ ನಿಯೋಜಿಸಿಕೊಳ್ಳುವ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರಸ್ತಾವನೆಯನ್ನು ತಡೆಹಿಡಿದು, ಈ ಹಿಂದಿನ ವೇತನ ಪಾವತಿಯ ರೀತಿ, ಪ್ರಸ್ತುತ ವೇತನ ಪಾವತಿ ಬಗ್ಗೆ ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಹಾಗೂ ಈ ವಿಷಯದಲ್ಲಿ ಆ ನೌಕರರುಗಳ ಬೇಡಿಕೆ/ಕೋರಿಕೆಯನ್ನು ಬಗೆಹರಿಸುವ ಬಗ್ಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ/ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಪ್ರಸ್ತಾವನೆ ಮಂಡಿಸಿ, ಸಮಿತಿಯ ತೀರ್ಮಾನದಂತೆ ಮುಂದಿನ ಕ್ರಮ ವಹಿಸಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಿ, ಕೆಳಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರಲಾಗಿದೆ.

- ವಾರ್ಡ್ ಸಂಖ್ಯೆ 78, ಕ್ವೀನ್ಸ್ ರಸ್ತೆ, ಗಣಕಯಂತ್ರ ಗೌರವ ಸಿಬ್ಬಂದಿಯ ನೇಮಕಾತಿ ಕಡತವು 1994ರಲ್ಲಿ ಪ್ರಾರಂಭವಾಗಿದ್ದು, ಮೂಲ ಕಡತವು ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಲಭ್ಯವಿರುವುದಿಲ್ಲವೆಂದು ಹಾಗೂ ವಾರ್ಡ್ ಸಂಖ್ಯೆ 50, ವಿಶ್ವೇಶ್ವರಪುರ, ಜಯನಗರ 2ನೇ ಬ್ಲಾಕ್, ಗಣಕಯಂತ್ರ ತರಬೇತಿ ಕೇಂದ್ರವು 1999ರಲ್ಲಿ ಪ್ರಾರಂಭಿಸಿದ್ದು, ಸದರಿ ಕಡತವು ಜೆ.ಸಿ. ರಸ್ತೆಯಲ್ಲಿರುವ ರೆಕಾರ್ಡ್ ರೂಂನಲ್ಲಿರುವ ಸಂಭವವಿರುವುದಾಗಿ ಕಲ್ಯಾಣಾಧಿಕಾರಿಗಳು ತಿಳಿಸಿರುತ್ತಾರೆ.
- ಉಪ ಆಯುಕ್ತರು (ಕಲ್ಯಾಣ) ರವರ ಕಛೇರಿ ಆದೇಶ ಸಂಖ್ಯೆ:ಕಅಸಿ3/ಪಿ.ಆರ್:45/04-05, ದಿನಾಂಕ:06-10-2006ರಂದು ಕಲ್ಯಾಣ ಇಲಾಖೆಯಿಂದ ಈ ಕೆಳಕಂಡಂತೆ ದಿನಾಂಕ:31-03-2007 ರವರೆಗೆ ವಿದ್ಯಾ ಇಲಾಖೆಗೆ ನಿಯೋಜಿಸಿರುತ್ತಾರೆ.

| ಕ್ರ. ಸಂ. | ಗೌರವ ಸಿಬ್ಬಂದಿಯ ಹೆಸರು | ಹುದ್ದೆ | ಮಾಹೆಯಾನ ವೇತನ |
|---|---|---|---|
| 1. | ಶ್ರೀ ರಂಗನಾಥ್ | ಪ್ರಾಂಶುಪಾಲರು | 7500.00 |
| 2. | ಶ್ರೀ ಎಸ್. ಅಶೋಕ್ | ಪ್ರಾಂಶುಪಾಲರು | 7500.00 |
| 3. | ಶ್ರೀ ಎಸ್. ಭಾಸ್ಕರನ್ | ಉಪನ್ಯಾಸಕರು | 6000.00 |
| 4. | ಶ್ರೀಮತಿ ಅರುಣಾ ರಮೇಶ್ | ಉಪನ್ಯಾಸಕರು | 6000.00 |
| 5. | ಶ್ರೀಮತಿ ಜೆ. ಪದ್ಮಿನಿ | ಉಪನ್ಯಾಸಕರು | 6000.00 |
| 6. | ಶ್ರೀ ಎಂ.ಕೆ. ಶಿವರಾಮ್ | ಮೇಲ್ವಿಚಾರಕರು | 3750.00 |
| 7. | ಶ್ರೀ ಎನ್. ಮಹೇಶ್ | ಮೇಲ್ವಿಚಾರಕರು | 3750.00 |
| 8. | ಶ್ರೀ ಸುಬ್ರಮಣಿ | ನಾ.ದ.ನೌಕರರು | 3000.00 |
| 9. | ಶ್ರೀ ಪಿ. ಅನ್ಬು | ನಾ.ದ.ನೌಕರರು | 3000.00 |
| 10. | ಶ್ರೀ ಬಾಬುನಾಯಕ್ | ನಾ.ದ.ನೌಕರರು | 3000.00 |



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

- ಕ್ರ.ಸಂ. (4)ರಲ್ಲಿರುವ ಶ್ರೀಮತಿ ಅರುಣಾ ರಮೇಶ್, ಉಪನ್ಯಾಸಕರು ದಿನಾಂಕ:01-11-2006 ರಿಂದ ಕೆಲಸಕ್ಕೆ ಗೈರು ಹಾಜರಾಗಿರುತ್ತಾರೆ.

- ಕ್ರ.ಸಂ. (6)ರಲ್ಲಿರುವ ಶ್ರೀ ಎಂ.ಕೆ. ಶಿವರಾಮ್, ಮೇಲ್ವಿಚಾರಕರು ಜೂನ್ 2007 ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ.

- ಶ್ರೀ ರಂಗನಾಥ್, ಪ್ರಾಂಶುಪಾಲರು ಹಾಗೂ ಶ್ರೀ ಅಶೋಕ್, ಪ್ರಾಂಶುಪಾಲರು ರವರು ಮಾರ್ಚ್ 2009ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ.

- ಕಲ್ಯಾಣ ಇಲಾಖೆಯಿಂದ ನಿಯೋಜನೆಗೊಂಡ ನೌಕರರುಗಳಿಗೆ ಏಪ್ರಿಲ್ 2007ರಿಂದ ಜನವರಿ 2012ರವರೆಗಿನ ವೇತನವನ್ನು ವಿದ್ಯಾ ಇಲಾಖೆಯ ಆಯವ್ಯಯ ಲೆಕ್ಕಶೀರ್ಷಿಕೆ 25 ಶಿಕ್ಷಣ, ಸಾಮಾನ್ಯ ವೆಚ್ಚಗಳು, ಗೌರವ ಸಿಬ್ಬಂದಿಗಳಿಗೆ ಗೌರವ ಸಂಭಾವನೆ ಲೆಕ್ಕಶೀರ್ಷಿಕೆಯಲ್ಲಿ ನೇರವಾಗಿ ನೌಕರರುಗಳ ಹೆಸರಿಗೆ ವೇತನವನ್ನು ಪಾವತಿಸಲಾಗಿರುತ್ತದೆ.

- ಮುಖ್ಯ ಲೆಕ್ಕಾಧಿಕಾರಿರವರು ಶ್ರೀ ಸುಬ್ರಮಣಿ, ನಾ.ದ.ನೌ. ಹಾಗೂ ಶ್ರೀ ಪಿ.ಅನ್ಬು, ನಾ.ದ.ನೌ. ಕ್ರಮವಾಗಿ ನಿರ್ದೇಶಕರು, ಶ್ರಮಿಕ ವಿದ್ಯಾಪೀಠ ರವರ ಜ್ಞಾಪನ ಪತ್ರ ಸಂಖ್ಯೆ: ಎಸ್.ವಿ.ಪಿ/ಬಿ.ಸಿಸಿ/94/95, ದಿನಾಂಕ:07-11-2004 ಹಾಗೂ 20-02-1995ರಂತೆ ಸಂಪೂರ್ಣವಾಗಿ ತಾತ್ಕಾಲಿಕವಾಗಿ ಸೆಕ್ಯೂರಿಟಿ ವಾಚ್‌ಮನ್ ಆಗಿ ನೇಮಕ ಮಾಡಲಾಗಿದ್ದು, ಉಳಿದ ಸಿಬ್ಬಂದಿಯ ನೇಮಕಾತಿ ವಿವರಗಳು ಕಡತದಲ್ಲಿ ಲಭ್ಯವಿರುವುದಿಲ್ಲ. ಸದರಿ ಸಿಬ್ಬಂದಿಗಳನ್ನು ಸಂಪೂರ್ಣವಾಗಿ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡಿರುವುದರಿಂದ ಹೊರಗುತ್ತಿಗೆ ಏಜೆನ್ಸಿ ಮೂಲಕ ನೇಮಕ ಮಾಡಿಕೊಳ್ಳುವುದು ಸೂಕ್ತವಾಗಿರುತ್ತದೆ. ಮುಂದುವರೆದಂತೆ **ಸದರಿ ಸಿಬ್ಬಂದಿಗಳನ್ನು ಹೊರಗುತ್ತಿಗೆ ಏಜೆನ್ಸಿ ಮೂಲಕ ನೇಮಕಾತಿ ಮಾಡಿಕೊಳ್ಳಲು ಕ್ರಮ ವಹಿಸುವಂತೆ ವಿದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ.**

- ಉಪ ಆಯುಕ್ತರು (ಕಲ್ಯಾಣ)ರವರ ಸಂಖ್ಯೆ:ಕ.ಅ/ಸಿ3/ಪಿ.ಆರ್:45/04-05, ದಿನಾಂಕ:06-10-2006 ರಂತೆ (ಕಡತದ ಪುಟ ಸಂಖ್ಯೆ 106ರಲ್ಲಿ ಲಗತ್ತಿಸಲಾಗಿದೆ) ಗೌರವ ಸಿಬ್ಬಂದಿಗಳನ್ನು ವಿದ್ಯಾ ಇಲಾಖೆಗೆ ನಿಯೋಜಿಸಲಾಗಿರುತ್ತದೆ. ಆದರೆ ಸದರಿಯವರನ್ನು ನೇಮಕ ಮಾಡಿಕೊಂಡಿರುವ ಯಾವುದೇ ವಿವರಗಳನ್ನು ವಿದ್ಯಾ ಇಲಾಖೆಗೆ ಕಳುಹಿಸಿರುವುದಿಲ್ಲ. ಟಿಪ್ಪಣಿ ಹಾಳೆ ಸಂಖ್ಯೆ-6 ಕಂಡಿಕೆ 19ರಂತೆ ಸದರಿಯವರುಗಳ ನೇಮಕಾತಿ ಮೂಲ ಕಡತವನ್ನು ಈ ಕಛೇರಿಗೆ ಕಳುಹಿಸುವಂತೆ ಉಪ ಆಯುಕ್ತರು



ಅಧ್ಯಕ್ಷರು

(ಕಲ್ಯಾಣ)ರವರಿಗೆ ಕಡತವನ್ನು ರವಾನಿಸಲಾಗಿತ್ತು. ಅದರಂತೆ ವಾರ್ಡ್ ನಂ 78ರಲ್ಲಿನ ನೌಕರರುಗಳು ನೇಮಕಾತಿ ಹೊಂದಿರುವ ಮೂಲ ಕಡತವು ಕಛೇರಿಯಲ್ಲಿ ಇರುವುದಿಲ್ಲವೆಂದು ಹಾಗೂ ವಾರ್ಡ್ ನಂ 50ರಲ್ಲಿನ ನೌಕರರುಗಳು ನೇಮಕಾತಿ ಹೊಂದಿರುವ ಕಡತವು ರೆಕಾರ್ಡ್ ರೂಂ ನಲ್ಲಿದ್ದು, ಅದು ದೊರೆತ ಕೂಡಲೇ ಕಳುಹಿಸಲಾಗುವುದೆಂದು ತಿಳಿಸಿರುತ್ತಾರೆ. ಆದರೆ ಇದುವರೆವಿಗೂ ಯಾವುದೇ ಮೂಲ ಕಡತವನ್ನು ಈ ಕಛೇರಿಗೆ ಕಳುಹಿಸಿರುವುದಿಲ್ಲ.

- ಸದರಿಯವರು ಉಪ ಆಯುಕ್ತರು (ಕಲ್ಯಾಣ)ರವರ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರೌಢಶಾಲೆಗಳಲ್ಲಿ ಸುಮಾರು 6-7 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಶಿಕ್ಷಣ ಇಲಾಖೆಯ ಆಯವ್ಯಯ 25 ಶಿಕ್ಷಣ, ಸಾಮಾನ್ಯ ವೆಚ್ಚಗಳು, ತರಬೇತಿ ಕೇಂದ್ರಗಳಲ್ಲಿ ಸಿಬ್ಬಂದಿಗಳಿಗೆ ಗೌರವ ಸಂಭಾವನೆ (ಪಿ0959)ರಲ್ಲಿ ವೇತನವನ್ನು ಪಾವತಿಸಲಾಗುತ್ತಿದೆ.
- ಸದರಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವುದಿಲ್ಲ. ಬದಲಾಗಿ ಗೌರವ ಸಂಭಾವನೆ ಆಧಾರದ ಮೇಲೆ ವೇತನ ಪಾವತಿಸಲಾಗುತ್ತಿದೆ
- ಸದರಿ ನೌಕರರುಗಳಿಗೆ ಫೆಬ್ರವರಿ 2012ರಿಂದ ಈ ತಹಲ್‌ವರೆವಿಗೂ ವೇತನವನ್ನು ಪಾವತಿಸಿರುವುದಿಲ್ಲ.
- ಈ ಹಿನ್ನೆಲೆಯಲ್ಲಿ ತಡೆಹಿಡಿದಿರುವ ವೇತನವನ್ನು ಪಾವತಿಸುವ ಹಿನ್ನೆಲೆಯಲ್ಲಿ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ಪಡೆಯಲು ಕಡತ ಮಂಡಿಸಲಾಗಿದ್ದು, ಕಾನೂನು ಕೋಶದ ಮುಖ್ಯಸ್ಥರು ಈ ಕೆಳಕಂಡಂತೆ ವರದಿ ಸಲ್ಲಿಸಿರುತ್ತಾರೆ.

Perused the documents made available in file. It is seen that initially the employees who are now working on Honorarium basis in the Education Department of the B.B.M.P wherein the welfare scheme which was parting with computer education in the local offices under the 18% scheme. After the closure of the computer training center, these employees were handed over to the Education department since, computer education was introduced in the syllabus. These officials were working in the Education department on Honorarium basis. It is also seen that these officials have been paid the Honorarium during the vacation period also.

It is also seen from the file that Additional Commissioner (Admn) has also sought for opinion as the whether these employees could be relived or continued. It is to be mentioned that earlier the authorities had sought for an opinion from the senior counsel Sri. Ashok Haranahalli in



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

an identical issue. The senior counsel in his letter dated:11-02-2001 had opined that certain conditions should be imposed apart from the condition already stipulated. The said conditions are as follows:

I It should be categorically stated that the work undertaken by the corporation is a specified project work and the right to claim Honorarium would come to an end once the project comes to an end.

II. The teacher working in the Training Centres are temporarily working on a part time basis and they have no right to claim Honorarium once the project work is over.

III. The teacher are not working as against any vacant posts borne in the establishment of the Bangalore city corporation and they are not the employees of the corporation.

Ongoing through the file, it is seen that the above conditions are not forthcoming. Further, the Apex Court in Uma Devi's case had said down certain conditions relating to appointment to public services is as follows:

1. Any public employment has to be in terms of the Constitutional scheme.
2. Adherence to the rule of equality in public employment is a basic feature of our Constitution.
3. Regular appointment must be the rule.
4. A regular process of recruitment or appointment has to be resorted to, when regular vacancies in posts, at a particular point of time, are to be filled up.
5. The appointment should be in terms of relevant rules and after a proper competition among the qualified persons. Otherwise, such appointment would not confer any right on the appointee.
6. If a contractual appointment is made, the appointment comes to an end at the end of the contractor. The Government or the instrumentality of the State cannot confer any permanency of such employment either by way of regularization or by way of absorption.
7. If it were an engagement or appointment on daily wages or casual basis, the same would come to an end when it is discontinued.
8. A temporary employee could not claim to be made permanent on the expiry of his term of appointment.



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ...

9. Merely because a temporary employee or a casual wage worker is continued for a time being beyond the term of his appointment, he would not be entitled to be absorbed in regular service or made permanent, merely on the strength on such continuance, if the original appointment was not made by following a due process of selection as envisaged by the relevant rules.

10. Regularization is not a mode of appointment.

11. Regularization can be only of irregular appointment.

12. Regularization of an illegal appointment is not permissible in law. It is not permissible in law, to confer permanence in the employee, whose appointment is illegal.

13. The Government or the instrumentality of the State cannot regularize the appointment made contrary to the course of selection as envisaged by the relevant rules.

14. The high Court acting under Article 226 of the Constitution of India should not ordinarily issue directions for absorption, regularization or permanent continuance unless the recruitment itself was made regularly and in terms of the constitutional scheme.

15. There should be no further by-passing of the constitutional requirement and regularization or making permanent those not duly appointed as per the constitutional scheme.

In view of the above judgment, it is not possible to regularize the employees who were appointed for a particular project. The employees will have to go as the project has been winded up. If their services are required by the Education department, then they may be obtained through outsourcing agency. Further, it is possible to examine the payment made to them during the vacation period.

ಮೇಲ್ಕಂಡ ವರದಿಗಳನ್ವಯ ಪಾಲಿಕೆಯ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗೌರವ ಸಿಬ್ಬಂದಿಗಳ ಕುರಿತಂತೆ ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:23.08.2013ರ ಸಂಖ್ಯೆ:ವಿದ್ಯಾ(2)ಪಿಆರ್–26/13–14 ಟಿಪ್ಪಣಿ.

**<u>ನಿರ್ಣಯ:</u> ವಿಷಯದ ಬಗ್ಗೆ ದೀರ್ಘವಾದ ಚರ್ಚೆಯ ನಂತರ ಸದರಿ ನೌಕರರುಗಳ ಪೈಕಿ ಹಾಲಿ ಕಾರ್ಯನಿರ್ವಹಿಸುತ್ತಿರುವ 6 ಜನ ಸಿಬ್ಬಂದಿಗಳ ಸೇವೆಯನ್ನು 3 ವರ್ಷಗಳ ಅವಧಿಗೆ ಮುಂದುವರೆಸಲು ಹಾಗೂ ಸದರಿಯವರುಗಳಿಗೆ ತಡೆಹಿಡಿದಿರುವ ವೇತನವನ್ನು ಕೂಡಲೇ ಬಿಡುಗಡೆ ಮಾಡಲು ಕ್ರಮಕೈಗೊಳ್ಳತಕ್ಕದೆಂದು ಸಮಿತಿಯ ತೀರ್ಮಾನಿಸಿದೆ.**

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಷಯ ಸಂಖ್ಯೆ: ಸಿಆಸುಸ್ಥಾಸ/08/2013-14

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಸರ್ಕಾರವು ಅಧಿಸೂಚನೆ ಸಂಖ್ಯೆ: ಸಿಆಸುಇ 15 ಸೇಇವಿ 2011 ದಿನಾಂಕ: 30-06-2012 ರಲ್ಲಿ ಕರ್ನಾಟಕ ನಾಗರೀಕ ಸೇವಾ ವರ್ಗೀಕರಣ,ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳು, 1957 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ 30.06.2012ರ ಅಧಿಸೂಚನೆ ಸಂಖ್ಯೆ: ಸಿಆಸುಇ 15 ಸೇಇವಿ 2011 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧೀಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ 30.06.2012 ರ ಕರ್ನಾಟಕ ರಾಜ್ಯಪತ್ರದ ಭಾಗ iv ಎ(ಸಂ.445) ರಲ್ಲಿ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ಅಧಿನಿಯಮ,1978 (1990 ರ ಕರ್ನಾಟಕ ಅಧಿನಿಯಮ-14) ರ 3ನೇ ಪ್ರಕರಣದ 2ನೇ ಉಪಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ: ಸದರಿ ರಾಜ್ಯಪತ್ರವನ್ನು 30.06.2012 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ಮತ್ತು ಸದರಿ ಕರಡಿನ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಸ್ವಿಕೃತವಾಗದಿರುವುದರಿಂದ, ಈಗ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ಅಧಿನಿಯಮ,1978( (1990 ರ ಕರ್ನಾಟಕ ಅಧಿನಿಯಮ-14)ರ 8ನೇ ಪ್ರಕರಣದೊಂದಿಗೆ ಓದಿಕೊಂಡ 3ನೇ ಪ್ರಕರಣದ(1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸಿ,ಅಧಿಸೂಚನೆ ಹೊರಡಿಸಿರುತ್ತದೆ

## ನಿಯಮಗಳು

1. **ಹೆಸರು ಮತ್ತು ಪ್ರಾರಂಭ**-(1) ಈ ನಿಯಮಗಳನ್ನು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)(ತಿದ್ದುಪಡಿ) ನಿಯಮಗಳು,2012 ಎಂದು ಕರೆಯತಕ್ಕದ್ದು.

   (2) ಈ ನಿಯಮವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 15 ಕ್ಕೆ ತಿದ್ದುಪಡಿ**- ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು 1957 ರ ನಿಯಮ 15ರ i)ಉಪನಿಯಮ(2ಬಿ)ರ ಖಂಡ(i) ರ ನಂತರ ಕೆಳಕಂಡ ಪರಂತುಕವನ್ನು ಪ್ರತಿಸ್ಥಾಪಿಸತಕ್ಕದ್ದು, ಅಂದರೆ:-

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ.
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

"ಪರಂತು, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿಯೋಜನೆಯ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಗುಂಪು 'ಬಿ' ಗುಂಪು 'ಸಿ' ಅಥವಾ ಗುಂಪು 'ಡಿ' ವೃಂದದ ನೌಕರರ ಪ್ರಕರಣಗಳಿಗೆ ಸಂಬಂಧಿಸಿದಂತೆ ಇನ್ನು ಮುಂದೆ ನೇಮಕಾತಿ ಪ್ರಾಧಿಕಾರದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು."

ii)ಉಪನಿಯಮ((3) ರ ಪರಂತುಕದಡಿ ಇರುವ ಉಪ ಖಂಡ(i) ರಲ್ಲಿ ರ "ಉಪನಿಯಮ (2ಎ) ರ ಖಂಡ(ii) ರ ಉಪಖಂಡ (ಎ) ಅಥವಾ" ಎಂಬ ಪದಗಳ ನಂತರ "ಖಂಡ(i) ರಡಿಯಿರುವ ಪರಂತುಕ ಮತ್ತು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಮೇಲ್ಕಂಡ ಸರ್ಕಾರದ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:29.09.2013ರ ಸಂಖ್ಯೆ:ಬಿ12(5ಜಿ)ಪಿಆರ್/511/2012-13 ರ ಟಿಪ್ಪಣಿ.

<u>ನಿರ್ಣಯ:</u> **ಆಯುಕ್ತರ ದಿನಾಂಕ: 29-09-2013 ರ ಟಿಪ್ಪಣಿಯನ್ನು ಒಪ್ಪಿದೆ.**

---

**ವಿಷಯ ಸಂಖ್ಯೆ: ಸಿಆಸುಸ್ಥಾಸ/09/2013-14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಸರ್ಕಾರವು ಆದೇಶ ಸಂಖ್ಯೆ:ಆಇ4 ಸೇನಿಸೇ 2012 ದಿನಾಂಕ:14-06-2012 ರಲ್ಲಿ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳ ನಿಯಮ 135(1) ರ ಪ್ರಕಾರ ಮಹಿಳಾ ಸರ್ಕಾರಿ ನೌಕರರಿಗೆ ಆ ನಿಯಮದಲ್ಲಿ ವಿಧಿಸಲಾದ ನಿಬಂಧನೆಗಳಿಗೆ ಒಳಪಟ್ಟು 135 ದಿನಗಳ ಪ್ರಸೂತಿ ರಜೆಯ ಅವಧಿಯನ್ನು ದಿನಾಂಕ 01.04.2012 ರಿಂದ ಜಾರಿಗೆ ಬರುವಂತೆ 180(ಒಂದು ನೂರಾ ಎಂಬತ್ತು) ದಿನಗಳಿಗೆ ಹೆಚ್ಚಿಸಲಾಗಿರುತ್ತದೆ.

ಸರ್ಕಾರಿ ಆದೇಶದ ಪ್ರಕಾರ ದಿನಾಂಕ 01.04.2012 ರಂದು ಅಥವಾ ನಂತರ ಪ್ರಸೂತಿ ರಜೆಯ ಮೇಲೆ ತೆರಳುವ ಮಹಿಳಾ ನೌಕರರು 180 ದಿನಗಳ ಪ್ರಸೂತಿ ರಜೆಗೆ ಅರ್ಹರಿರುತ್ತಾರೆ. ದಿನಾಂಕ 01.04.2012 ಕ್ಕೂ ಪೂರ್ವದಲ್ಲಿ ಪ್ರಸೂತಿ ರಜೆಯ ಮೇಲೆ ತೆರಳಿದ್ದು ಆ ದಿನಾಂಕದಂದು 135 ದಿನಗಳನ್ನು ಪೂರೈಸದೇ ಇದ್ದು ಮತ್ತು ಇದೇ ರಜೆಯ ಮೇಲೆ ದಿನಾಂಕ 01.04.2012 ರಂದು ಮುಂದುವರೆಯುತ್ತಿರುವ ಮಹಿಳಾ ನೌಕರರೂ 180 ದಿನಗಳ ಪ್ರಸೂತಿ ರಜೆಯ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ ಹಾಗೂ 135 ದಿನಗಳ ಪ್ರಸೂತಿ ರಜೆಯನ್ನು ಪೂರೈಸಿ, ದಿನಾಂಕ 01.04.2012 ರಂದು ಬೇರೆ ವಿಧವಾದ ರಜೆಯ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೇಲೆ ಮುಂದುವರೆದಿರುವ ಮಹಿಳಾ ಸರ್ಕಾರಿ ನೌಕರರುಗಳು ಈ 180 ದಿನಗಳ ಪ್ರಸೂತಿ ರಜೆಯ ಸೌಲಭ್ಯವನ್ನು ಪಡೆಯಲು ಅರ್ಹರಾಗುವುದಿಲ್ಲ ಎಂದು ಆದೇಶಿಸಲಾಗಿರುತ್ತದೆ. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 135(1) ಕ್ಕೆ ಅವಶ್ಯಕ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು ಎಂದು ತಿಳಿಸಲಾಗಿರುತ್ತದೆ.

ಮುಖ್ಯ ಲೆಕ್ಕಾಧಿಕಾರಿಗಳು ವರದಿಯಲ್ಲಿ ,ವೇತನ ಸಮಿತಿಯು ಪ್ರಸೂತಿ ರಜೆಯನ್ನು 135 ದಿನಗಳಿಂದ 180 ದಿನಗಳಿಗೆ ಹೆಚ್ಚಿಸುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ: ಆಇ 4 ಸೇನಿಸೇ 2012, ಬೆಂಗಳೂರು, ದಿನಾಂಕ 14.06.2012 ರಂದು ಆದೇಶ ಹೊರಡಿಸಿರುವುದರಿಂದ, ಸದರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಮಾನ್ಯ ಆಯುಕ್ತರ ಅನುಮೋದನೆಯೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸುವ ಬಗ್ಗೆ ಮುಂದಿನ ಕ್ರಮವಹಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲ್ಕಂಡ ಸರ್ಕಾರದ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:29.09.2013ರ ಸಂಖ್ಯೆ:ಬಿ12(5ಜಿ)ಪಿಆರ್/103/2012-13 ರ ಟಿಪ್ಪಣಿ.

**<u>ನಿರ್ಣಯ:</u>** **ಆಯುಕ್ತರ ದಿನಾಂಕ: 29-09-2013 ರ ಟಿಪ್ಪಣಿಯನ್ನು ಒಪ್ಪಿದೆ.**

---

**ವಿಷಯ ಸಂಖ್ಯೆ: ಸಿಆಸುಸ್ಥಾಸ/10 /2013-14**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ, ಶ್ರೀ ಎಂ. ರಾಜಣ್ಣ, ನಿವೃತ್ತ ಹಿರಿಯ ಆರೋಗ್ಯ ಪರಿವೀಕ್ಷಕರು, ಇವರು ದಿನಾಂಕ: 30-06-2013 ರಂದು ಸೇವೆಯಿಂದ ವಯೋ ನಿವೃತ್ತಿಯನ್ನು ಹೊಂದಿದ್ದು, ಇವರ ಸೇವೆಯನ್ನು ವಿಸ್ತರಿಸಲು ನಿಯಮಾನುಸಾರ ಕ್ರಮ ತೆಗೆದುಕೊಳ್ಳುವಂತೆ ಉಲ್ಲೇಖಿತದ ಪತ್ರದಲ್ಲಿ ಮಾನ್ಯ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ಕೋರಿರುತ್ತಾರೆ.

ಈ ಸಂಬಂಧವಾಗಿ, ಕಾನೂನು ಕೋಶದ ಮುಖ್ಯಸ್ಥರು ವರದಿಯಲ್ಲಿ ನಗರಾಭಿವೃದ್ಧಿ ಇಲಾಖೆ ಪತ್ರದ ಸಂಖ್ಯೆ: ನಅಇ 210 ಎಂಎನ್‌ಯು ದಿನಾಂಕ: 30-07-2011ರ ಪತ್ರದಲ್ಲಿ ತಿಳಿಸಿರುವಂತೆ ನಿವೃತ್ತಿ ಹೊಂದಿದ ನೌಕರರನ್ನು ಸಂಚಿತ ವೇತನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದು / ಮುಂದುವರಿಸುವುದು ಒಳ್ಳೆಯ ಸಂಪ್ರದಾಯವಲ್ಲ ಹಾಗೂ ಇಂತಹ ಪ್ರಸ್ತಾವನೆಗಳನ್ನು ಸರ್ಕಾರವು ಪುರಸ್ಕರಿಸುವುದಿಲ್ಲ ಎಂಬುದಾಗಿ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ...

ತಿಳಿಸಿರುತ್ತಾರೆ. ಅಲ್ಲದೆ ಶ್ರೀ ಎಂ. ರಾಜಣ್ಣ ನವರು ಯಾವುದಾದರೂ ಕಾರ್ಯದಲ್ಲಿ ವಿಶೇಷ ಪರಿಣತಿಯನ್ನು ಹೊಂದಿದ್ದು, ಅಂತಹ ವಿಶೇಷ ಪರಿಣತೆಯನ್ನು ಹೊಂದಿರುವ ಬೇರೊಬ್ಬ ಸಿಬ್ಬಂದಿ ಇಲ್ಲದಿದ್ದ ಪಕ್ಷದಲ್ಲಿ ಹಾಗೂ ಇವರ ಸೇವೆಯನ್ನು ಪಡೆಯದಿದ್ದರೆ ನಗರ ಪಾಲಿಕೆಯ ಕೆಲಸ ಕಾರ್ಯಗಳು ಕುಂಠಿತವಾಗುತ್ತವೆ ಎಂಬುದನ್ನು ಪರಿಗಣಿಸುವುದಾದರೆ, ಅಂತಹ ಪ್ರಸಂಗಗಳಲ್ಲಿ ಆಯುಕ್ತರ ಮುಖಾಂತರ ಸರ್ಕಾರದ ಅನುಮೋದನೆ ಪಡೆದು ಸಂಚಿತ ವೇತನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬಹುದು ಎಂದು ಅಭಿಪ್ರಾಯ ನೀಡಿರುತ್ತಾರೆ.

ಪಾಲಿಕೆಯ ಘನತ್ಯಾಜ್ಯ ವಸ್ತುಗಳ ನಿರ್ವಹಣೆಯ ಹಿತದೃಷ್ಟಿಯಿಂದ ಶ್ರೀ ಎಂ. ರಾಜಣ್ಣ, ನಿವೃತ್ತ ಹಿರಿಯ ಆರೋಗ್ಯ ಪರಿವೀಕ್ಷಕರು ರವರನ್ನು ಸಂಚಿತ ವೇತನದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರಲು ತೀರ್ಮಾನಕ್ಕಾಗಿ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಮುಂದೆ ಕಡತ ಸಂಖ್ಯೆ: ಬಿ12(4)ಪಿಆರ್/29/2013-14 ರಲ್ಲಿ ಆಯುಕ್ತರು ಮಂಡಿಸಿರುವ ದಿನಾಂಕ:11.11.2013ರ ಟಿಪ್ಪಣಿ.

**ನಿರ್ಣಯ:** **ಆಯುಕ್ತರ ದಿನಾಂಕ: 11-11-2013 ರ ಟಿಪ್ಪಣಿಯನ್ನು ಒಪ್ಪಿದೆ.**

---

**ವಿಷಯ ಸಂಖ್ಯೆ: ಸಿಆಸುಸ್ಥಾಸ/11/2013-14**

**ಸ್ವನಿರ್ಣಯ:**

ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಕೆಲವು ಹುದ್ದೆಗಳು ಇಲ್ಲದೇ ಇದ್ದರೂ ಸಹ (ಉದಾಹರಣೆಗೆ ಅಕೌಂಟೆಂಟ್, ಸಮುದಾಯ ಸಂಘಟಕರು, ಸಮುದಾಯ ಸಂಘಟನಾಧಿಕಾರಿ) ಇವರುಗಳನ್ನು ಸ್ವಂತ ವೇತನ ಶ್ರೇಣಿಯಲ್ಲಿ ವಿವಿಧ ಹುದ್ದೆಗಳಿಗೆ ನೇಮಿಸಿದ್ದು, ಈ ರೀತಿ ನೇಮಕ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲದಿದ್ದರೂ ಸಹ ಯಾವ ಕಾಯ್ದೆಯಡಿಯಲ್ಲಿ ನೇಮಕ ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ. ಈ ರೀತಿ ನೇಮಕ ಮಾಡಿ ಸದರಿ ನೌಕರರುಗಳ ನೇಮಕಾತಿ ಹೊಂದಿದ ದಿನಾಂಕದಿಂದ ಜೇಷ್ಠತಾ ಪಟ್ಟಿ ತಯಾರಿಸಿದಲ್ಲಿ ಪಾಲಿಕೆಯ ಮೂಲ ನೌಕರರುಗಳಿಗೆ ಅನ್ಯಾಯವಾಗಿರುವ ಬಗ್ಗೆ ಹಲವಾರು ವಿಧವಾದ ಆಕ್ಷೇಪಣೆಗಳೂ ಇರುತ್ತದೆ.

ಸಮುದಾಯ ಸಂಘಟನಾಧಿಕಾರಿ ಹಾಗೂ ಸಮುದಾಯ ಸಂಘಟಕರ ಹುದ್ದೆಗಳನ್ನು ಪೌರಾಡಳಿತ ಇಲಾಖೆಯು ಕೇಂದ್ರ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, ಆ ಯೋಜನೆ ಮುಗಿಯುವ ವರೆಗೆ ಮಾತ್ರ ನೇಮಿಸಿಕೊಂಡಿದ್ದು, ಆ ಹುದ್ದೆ ಪಾಲಿಕೆಯಲ್ಲಿ ಅವಶ್ಯಕವಿಲ್ಲದೇ ಇದ್ದರೂ ಸಹ ಸದರಿ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೌಕರರುಗಳನ್ನು ತತ್ಸಮಾನ ಹುದ್ದೆಗಳಿಗೆ ನೇಮಿಸಿರುವ ಕ್ರಮ ಕಾನೂನುಬಾಹಿರವಾಗಿರುತ್ತದೆ. ಇವರುಗಳ ಹುದ್ದೆಗಳು ಪಾಲಿಕೆಗೆ ಅವಶ್ಯವಿಲ್ಲದ್ದರಿಂದ ಇವರುಗಳನ್ನು ಪೌರಾಡಳಿತ ಇಲಾಖೆಗೆ ಹಿಂದಿರುಗಿಸಿ, ಕೇಂದ್ರ ಸರ್ಕಾರದ ಕಲ್ಯಾಣ ಯೋಜನೆಗಳ ಅನುಷ್ಠಾನಕ್ಕಾಗಿ ಉಪಯೋಗಿಸಿಕೊಳ್ಳಲು ಕ್ರಮ ಕೈಗೊಳ್ಳಬಹುದಾಗಿದ್ದರೂ ಸಹ ಈ ಬಗ್ಗೆ ಕ್ರಮ ಜರುಗಿಸದೇ ಇರುವುದು ಖಂಡನೀಯ.

ಆಯುಕ್ತರ ಕಛೇರಿ ಆದೇಶ ಸಂಖ್ಯೆ:ಬಿ12(1)ಪಿಆರ್/54/2010-11/2011-12, ದಿನಾಂಕ:18/06/2012 ರಲ್ಲಿ ಪಾಲಿಕೆಯಲ್ಲಿ ವಿಲೀನಗೊಂಡಿರುವ ಸಮುದಾಯ ಸಂಘಟನಾಧಿಕಾರಿಗಳನ್ನು ಮತ್ತು ಸಮುದಾಯ ಸಂಘಟಕರುಗಳನ್ನು ವ್ಯವಸ್ಥಾಪಕರು ಮತ್ತು ಪ್ರಥಮ ದರ್ಜೆ ಸಹಾಯಕರುಗಳ ಹುದ್ದೆಗಳಿಗೆ ಪರಿಗಣಿಸಿದೆ ಎಂದು ಸರ್ಕಾರಕ್ಕೆ ಪತ್ರ ಬರೆದು ಹಾಗೂ ಸದರಿಯವರುಗಳ ಸೇವೆಯನ್ನು ಪಾಲಿಕೆಯ ಕಲ್ಯಾಣ ಇಲಾಖೆಯಲ್ಲಿ ಉಪಯೋಗಿಸಿಕೊಳ್ಳಲು ತೀರ್ಮಾನಿಸಿದ್ದು, ಆದರೆ ಸದರಿ ಸಮುದಾಯ ಸಂಘಟನಾಧಿಕಾರಿಗಳಿಗೆ ಹಾಲಿ ನಿಯಮ 68ರಡಿ ಪ್ರಭಾರ ಸಹಾಯಕ ಕಂದಾಯ ಅಧಿಕಾರಿಗಳ ಹುದ್ದೆಗೆ ನೇಮಿಸಿದ್ದು, ಇದು ಸಮಿತಿಯ ತೀರ್ಮಾನಕ್ಕೆ ವಿರುದ್ಧವಾದ ಕ್ರಮವಾಗಿದ್ದು ಸದರಿ ಸಮುದಾಯ ಸಂಘಟನಾಧಿಕಾರಿಗಳನ್ನು ಮತ್ತು ಸಮುದಾಯ ಸಂಘಟಕರುಗಳನ್ನು ಪಾಲಿಕೆಯ ಕಲ್ಯಾಣ ಇಲಾಖೆಯಲ್ಲಿ ಬಳಸಿಕೊಳ್ಳಬಹುದಾಗಿದ್ದು ಇವರುಗಳನ್ನೆಲ್ಲ ಕಂದಾಯ ವಿಭಾಗದಲ್ಲಿ ನೇಮಕ ಮಾಡಲಾಗಿರುವ ಕ್ರಮವು ನಿಯಮಬಾಹಿರವಾಗಿರುತ್ತದೆ. ಪಾಲಿಕೆಯ ಕಲ್ಯಾಣ ಇಲಾಖೆಯಲ್ಲಿ ಅಧಿಕಾರಿ/ಸಿಬ್ಬಂದಿಗಳ ಕೊರತೆ ಇದ್ದು ಈ ಇಲಾಖೆಯ ಹಿತದೃಷ್ಟಿಯಿಂದ ಇವರುಗಳನ್ನು ಕಂದಾಯ ಇಲಾಖೆಯಿಂದ ಹಿಂಪಡೆದು ಕೂಡಲೇ ಕಲ್ಯಾಣ ವಿಭಾಗಕ್ಕೆ ನಿಯೋಜಿಸುವಂತೆ ಕ್ರಮ ಕೈಗೊಂಡಿಲ್ಲದೇ ಇರುವುದು ಸಹ ಶೋಚನೀಯ.

ಸದರಿ ನೌಕರರುಗಳನ್ನು ಪಾಲಿಕೆಗೆ ವಿಲೀನಾತಿಗೊಳಿಸಲು ಸರ್ಕಾರವು ಆದೇಶಿಸಿರುವುದು ಸರಿಯಷ್ಟೆ, ಆದರೆ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಸದರಿ ನೌಕರರುಗಳಿಗೆ ಮಂಜೂರಾತಿ ಹುದ್ದೆಗಳು ಇರುವುದಿಲ್ಲ. ಒಂದು ಪಕ್ಷ ಸದರಿ ನೌಕರರುಗಳನ್ನು ವಿಲೀನಗೊಳಿಸಲು ಮಂಜೂರಾತಿ ಹುದ್ದೆಗಳು ಇಲ್ಲದೇ ಇದ್ದಲ್ಲಿ ಈ ಬಗ್ಗೆ ಹೊಸ ಹುದ್ದೆಗಳನ್ನು ಸೃಜಿಸಲು ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಕೌನ್ಸಿಲ್ ಸಭೆಯ ಅನುಮೋದನೆ ಅಗತ್ಯವಿರುತ್ತದೆ. ಮಂಜೂರಾತಿ ಹುದ್ದೆ ಇಲ್ಲದೆಯೇ ಸದರಿ ನೌಕರರುಗಳನ್ನು ವಿಲೀನಗೊಳಿಸಿ ಕೆಲವರುಗಳಿಗೆ ಈಗಾಗಲೇ ಕಾನೂನು ಬಾಹಿರವಾಗಿ ಮುಂಬಡ್ತಿ ನೀಡಿರುವ ಕ್ರಮವು ಸಹ ಖಂಡನೀಯ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರಸ್ತುತ ಪಾಲಿಕೆಗೆ ವಿಲೀನಗೊಂಡಿರುವ ಸದರಿ ವೃಂದದ ನೌಕರರು/ಅಧಿಕಾರಿಗಳ ಪೈಕಿ ಯಾರೊಬ್ಬರೂ ಪರೀಕ್ಷಾರ್ಥ ಸೇವಾ ಅವಧಿಯನ್ನು ತೃಪ್ತಿಕರವಾಗಿ ಘೋಷಿಸಿಕೊಳ್ಳದೇ ಇದ್ದು, ಈ ನೌಕರರುಗಳು ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಿಕೊಳ್ಳವ ಅಗತ್ಯವಿಲ್ಲವೇ? ಕೆ.ಸಿ.ಎಸ್.ಆರ್ ನಿಯಮದ ಪ್ರಕಾರ ಎಲ್ಲಾ 'ಸಿ' ವೃಂದದ ಮೇಲ್ಪಟ್ಟ ಅಧಿಕಾರಿ/ನೌಕರರುಗಳು ಕಡ್ಡಾಯವಾಗಿ ಪರೀಕ್ಷಾರ್ಥ ಸೇವಾ ಅವಧಿಯನ್ನು ಘೋಷಿಸಿಕೊಳ್ಳ ಬೇಕಾಗಿದ್ದು, ಇಲ್ಲದೇ ಇದ್ದ ಪಕ್ಷದಲ್ಲಿ ಅಂಥಹ ನೌಕರರುಗಳಿಗೆ 2 ವಾರ್ಷಿಕ ವೇತನಕ್ಕಿಂತ ಹೆಚ್ಚಿನ ವಾರ್ಷಿಕ ವೇತನವನ್ನಾಗಲೀ ಹಾಗೂ ಮುಂಬಡ್ತಿಯನ್ನಾಗಲೀ ನೀಡಲು ಅವಕಾಶವಿರುವುದಿಲ್ಲಾ ಈ ಬಗ್ಗೆ ಪೂರ್ಣ ವಿವರಣೆ ಇಲ್ಲದೆಯೇ ಸದರಿ ನೌಕರರುಗಳನ್ನು ಮುಂಬಡ್ತಿಗೆ ಪರಿಗಣಿಸಿರುವುದು ಸಹ ನಿಯಮಬಾಹಿರ ಕ್ರಮವಾಗಿರುತ್ತದೆ.

ಸಮುದಾಯ ಸಂಘಟಕರನ್ನು ಕಲ್ಯಾಣ ಇಲಾಖೆಯ ಕೆಲಸ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುವ ಬದಲಿಗೆ ಕಂದಾಯ ಇಲಾಖೆ ಹಾಗೂ ಇತರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ರಮವನ್ನು ರದ್ದು ಪಡಿಸಿ ಕಲ್ಯಾಣ ಇಲಾಖೆಯಲ್ಲಿಯೇ ಕಾರ್ಯನಿರ್ವಹಿಸಲು ತೀರ್ಮಾನ ಕೈಗೊಳ್ಳಬೇಕಾಗಿದೆಯೆಂದು ವರದಿಯಾಗಿದ್ದು, ಆದರೆ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಸಮುದಾಯ ಸಂಘಟಕರುಗಳನ್ನು ಜೇಷ್ಠತಾ ಪಟ್ಟಿಗೆ ಸೇರ್ಪಡೆಗೊಳಿಸಿ ದಿನಾಂಕ:28.01.2013ರಂದು ಪ್ರಥಮ ದರ್ಜೆ ಗುಮಾಸ್ತರುಗಳ ಅಂತಿಮ ಸೇವಾ ಜೇಷ್ಠತಾ ಪಟ್ಟಿಯನ್ನು ಹೊರಡಿಸಿರುವ ಕ್ರಮವು ನಿಯಮಬಾಹಿರವಾಗಿದ್ದು, ಈ ಬಗ್ಗೆ ಸಂಕ್ಷಿಪ್ತ ವರದಿಯನ್ನು ಸಮಿತಿಯ ಅವಗಾಹನೆಗೆ ಮಂಡಿಸತಕ್ಕದ್ದೆಂದು ತಿಳಿಸಿದ್ದರೂ ಸಹ ಯಾವುದೇ ವಿಧವಾದ ಕ್ರಮ ಕೈಗೊಂಡಿಲ್ಲದೇ ಇರುವುದು ಕಂಡುಬಂದಿರುತ್ತದೆ.

ಸದರಿ ಪ್ರಕರಣದಲ್ಲಿ ಪರೀಕ್ಷಾರ್ಥ ಸೇವಾ ಅವಧಿ ಘೋಷಿಸಿಕೊಳ್ಳದಂತಹ ನೌಕರರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳುವ ಕುರಿತಂತೆ ಸುತ್ತೋಲೆ ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ವರದಿಯಾಗಿದ್ದು, ಈ ಸಂಬಂಧದ ಸುತ್ತೋಲೆ ಪ್ರತಿಯನ್ನು ಯಾವ ದಿನಾಂಕದಂದು ಹೊರಡಿಸಿದೆ? ಎಂಬ ಬಗ್ಗೆ ಯಾವುದೇ ದಾಖಲೆಗಳು ಕಡತದಲ್ಲಿ ಇರುವುದಿಲ್ಲ.

ಈ ಪ್ರಕ್ರಿಯೆಯಲ್ಲಿ ದಿನಾಂಕ:05-08-2013 ರಂದು ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯವನ್ನು ಕೂಲಂಕುಷವಾಗಿ ಪರಿಶೀಲಿಸಿದ್ದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳ ವಿರುದ್ಧವಾಗಿ ಸ್ಥಳೀಯ ಸಂಸ್ಥೆಗಳಲ್ಲಿ ಸ್ವರ್ಣ ಜಯಂತಿ ಶಹರಿ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರೋಜ್‌ಗಾರ್ ಯೋಜನೆಯಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನಿರ್ದಿಷ್ಟ ಕೆಲಸಗಳಿಗಾಗಿ ನೇಮಕಾತಿ ಮಾಡಿಕೊಂಡಿದ್ದು ಅವರನ್ನು ಮುಖ್ಯಾಧಿಕಾರಿ ಶ್ರೇಣಿ-1 ವೃಂದಕ್ಕೆ ಬಡ್ತಿ ನೀಡಿದ್ದು ಇದರಿಂದಾಗಿ ಅವರು ನಿರ್ವಹಿಸುವ ಕೆಲಸ ಕಾರ್ಯಗಳಲ್ಲಿ ವ್ಯತ್ಯಯ ಉಂಟಾಗಲಿರುವುದರಿಂದ ಈ ಮೇರೆಗೆ ಸದರಿ ಯೋಜನೆಯ ಉದ್ದೇಶವೇ ವ್ಯರ್ಥವಾಗಲಿರುವುದರಿಂದ ಸಮುದಾಯ ಸಂಘಟನಾಧಿಕಾರಿಗಳನ್ನು ಮುಖ್ಯಾಧಿಕಾರಿ ಹುದ್ದೆಗೆ ನೇಮಿಸಲು ವೃಂದಾ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ ತರುವಂತೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಕೈಬಿಡಲು ಸರ್ಕಾರದ ಹಂತದಲ್ಲಿಯೂ ತೀರ್ಮಾನಿಸಿರುವುದನ್ನು ಗಮನಿಸುತ್ತಾ ಸಮುದಾಯ ಸಂಘಟಕರ ಹುದ್ದೆಯು ಪೂರ್ಣ ಪ್ರಮಾಣದಲ್ಲಿ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳಿಗೆ ಮಾತ್ರ ನೇಮಕ ಮಾಡುವುದು ಸಂಪ್ರದಾಯವಾಗಿದ್ದು, ಆದರೆ ಅವರುಗಳನ್ನು ಚುನಾವಣೆ ಕೆಲಸ ಕಾರ್ಯಗಳು, ಕಂದಾಯ ಇಲಾಖೆಯ ಕೆಲಸಕಾರ್ಯಗಳಿಗೆ ನೇಮಕ ಮಾಡುವ ಕ್ರಮವು ನಿಯಮಬಾಹಿರವಾಗಿರುತ್ತದೆ ಎಂಬ ಅಂಶವನ್ನು ಸಮಿತಿಯು ಮನಗಂಡಿರುತ್ತದೆ. ಸರ್ಕಾರವು ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯ ಅನುಷ್ಠಾನಕ್ಕೆ ಹಲವಾರು ಕೋಟಿ ರೂಗಳನ್ನು ಮಂಜೂರಾತಿ ನೀಡಿ ಗುತ್ತಿಗೆ ಆಧಾರದ ಮೇಲೆ ನಿರ್ದಿಷ್ಟ ಕೆಲಸಗಳಿಗಾಗಿ ಮಾತ್ರ ನೇಮಕಾತಿ ಮಾಡಿಕೊಂಡಿದ್ದು, ಸಮುದಾಯ ಸಂಘಟನಾಧಿಕಾರಿಗಳನ್ನು ಯಾವುದೇ ವೃಂದಾ ಮತ್ತು ನೇಮಕಾತಿ ನಿಯಮಗಳ ಅನ್ವಯ ಸರ್ಕಾರಿ ಸೇವೆಗೆ ನೇಮಕಾತಿಯಾಗಿರುವುದಿಲ್ಲವೆಂಬ ಅಂಶವನ್ನು ಸಹ ಮನಗಂಡಿರುತ್ತದೆ.

ಈ ಪ್ರಕರಣದಲ್ಲಿ ಅತಿ ಮುಖ್ಯವಾದ ಲೋಪವೊಂದು ಕಂಡುಬಂದಿದ್ದು, ಸಮುದಾಯ ಸಂಘಟನಾಧಿಕಾರಿಗಳ ಪೈಕಿ ಹಾಲಿ ಪ್ರಭಾರದ ಮೇಲೆ ಸಹ ಕಂದಾಯ ಅಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 5 ಜನ ನೌಕರರು ಪರೀಕ್ಷಾರ್ಥ ಸೇವಾ ಅವಧಿಯು ತಹಲ್‌ವರೆವಿಗೂ ಘೋಷಿಸಿಕೊಳ್ಳದೇ ಇರುವುದು ಕಂಡುಬಂದಿರುತ್ತದೆ. ಈ ಪ್ರಕ್ರಿಯೆ ಕುರಿತಂತೆ ಸಮಿತಿಯ ತೀರ್ಮಾನಕ್ಕಾಗಿ ಬಂದ ಕಡತವನ್ನು ಹಿಂದಿನ ಅಧ್ಯಕ್ಷರು ಪರಿಶೀಲಿಸಿದ ಸಂದರ್ಭದಲ್ಲಿ ಸದರಿ ನೌಕರರುಗಳ ಮೂಲ ನೇಮಕಾತಿ ಆದೇಶ ಕುರಿತಂತೆ ಯಾವುದೇ ವಿಧವಾದ ಮಾಹಿತಿಯು ಲಭ್ಯವಿಲ್ಲದಿದ್ದು, ಈ ಕುರಿತಂತಹ ಅವಲೋಕನೆಗೆ ತಹಲ್‌ವರೆವಿಗೂ ಆಯುಕ್ತರಿಂದ ವರದಿ ಬಾರದೆ ಇರುವುದು ಸಹ ಸೋಜಿಗದ ಸಂಗತಿಯಾಗಿದ್ದು ಈ ಎಲ್ಲಾ ನ್ಯೂನತೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಹಾಲಿ ಪಾಲಿಕೆಯ ವೃಂದಾ ಮತ್ತು ನೇಮಕಾತಿ ನಿಯಮಗಳಲ್ಲಿ ಸಮುದಾಯ ಸಂಘಟಕರ ವೃಂದದ ಹುದ್ದೆಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ವೃಂದದ ಹುದ್ದೆಯೂ ಸಹ ಪಾಲಿಕೆ ಸೇವೆಗೆ ಅವಶ್ಯಕತೆ ಇಲ್ಲದಿರುವುದರಿಂದ ಕೂಡಲೇ ಮೇಲ್ಕಂಡ ವೃಂದದ ನೌಕರರುಗಳನ್ನು ಪಾಲಿಕೆ ಸೇವೆಯಿಂದ ಬಿಡುಗಡೆಗೊಳಿಸಿ ಪೌರಾಡಳಿತ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ...

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ಇಲಾಖೆಗೆ ಹಿಂತಿರುಗಿಸಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಆಯುಕ್ತರಿಗೆ ಸೂಚಿಸಲು ಸಮಿತಿಯ ಸರ್ವಾನುಮತದಿಂದ ತೀರ್ಮಾನಿಸಿದೆ.

ಲಕ್ಷ್ಮೀಕಾಂತ ರೆಡ್ಡಿ
ಅಧ್ಯಕ್ಷರು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಪ್ರತಿಯನ್ನು:

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ.*
3. *ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ*
4. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
5. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ*
6. *ಅಪರ ಆಯುಕ್ತರು/ಉಪ ಆಯುಕ್ತರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ*
7. *ಕಾನೂನು ಕೋಶದ ಮುಖ್ಯಸ್ಥರು ರವರಿಗೆ*
8. *ಮುಖ್ಯ ಆರೋಗ್ಯಾಧಿಕಾರಿ ರವರಿಗೆ*
9. *ವಿದ್ಯಾಧಿಕಾರಿಗಳು ರವರಿಗೆ*
10. *ಕೌನ್ಸಿಲ್ ಕಾರ್ಯದರ್ಶಿಗಳು*
11. *ಕಛೇರಿ ಪ್ರತಿ.*

20